1

# ಪೀಠಿಕೆ. ಹೊಸ ಇತಿಹಾಸ: ಅದರ ಭೂತ ಮತ್ತು ಭವಿಷ್ಯ

ಪೀಟರ್ ಬರ್ಕ್

ಬಹುಶಃ ಕಳೆದ ತಲೆಮಾರಿನಿಂದ ಇತಿಹಾಸಕಾರರ ಜಗತ್ತು ಚಕಿತಗೊಳ್ಳುವಷ್ಟು ವೇಗದಲ್ಲಿ ಹಿಗ್ಗುತ್ತಿದೆ. 19ನೆಯ ಶತಮಾನದಲ್ಲಿ ಪ್ರಧಾನವಾಗಿದ್ದ ರಾಷ್ಟ್ರೀಯ ಇತಿಹಾಸವು ಗಮನವನ್ನು ಸೆಳೆಯುವ ಸಲುವಾಗಿ ಜಾಗತಿಕ ಇತಿಹಾಸ ಹಾಗೂ ಸ್ಥಳೀಯ ಇತಿಹಾಸಗಳ ಜೊತೆಗೆ (ಒಂದು ಕಾಲದಲ್ಲಿ ಇವೆರಡಕ್ಕೂ ಪುರಾತತ್ವಜ್ಞರು ಹಾಗೂ ಹವ್ಯಾಸಿಗಳೇ ಗತಿಯಾಗಿತ್ತು). ಪೈಪೋಟಿ ನಡೆಸುವ ಪರಿಸ್ಥಿತಿ ಬಂದಿದೆ. ಇಂದು ಅನೇಕ ಹೊಸ ಕ್ಷೇತ್ರಗಳಿವೆ. ಅವುಗಳನ್ನು ವಿಶೇಷ ಪತ್ರಿಕೆಗಳು ಆಗಾಗ ಬೆಂಬಲಿಸುತ್ತವೆ. ಉದಾಹರಣೆಗೆ, ಸಾಮಾಜಿಕ ಇತಿಹಾಸವು ಆರ್ಥಿಕ ಇತಿಹಾಸದಿಂದ ಸ್ವತಂತ್ರವಾದ ನಂತರ ಚರಿತ್ರೆಯ ಜನವಿವರಣೆ, ದುಡಿಮೆಯ ಇತಿಹಾಸ, ನಗರಗಳ ಇತಿಹಾಸ, ಗ್ರಾಮೀಣ ಇತಿಹಾಸ ಮುಂತಾಗಿ ಹೊಸ ರಾಷ್ಟ್ರಗಳೋ ಎಂಬಂತೆ ವಿಭಜಿತವಾಗಿದೆ.

ಆರ್ಥಿಕ ಇತಿಹಾಸವು ಕೂಡ 'ಹಳೆಯದು' ಹಾಗೂ 'ಹೊಸದು' ಎಂಬುದಾಗಿ ವಿಭಾಗಗೊಂಡಿದೆ. 1950-60ರ ಕಾಲದ 'ಹೊಸ ಆರ್ಥಿಕ ಇತಿಹಾಸ' (ಈಗ ಅದು ಪ್ರಾಚೀನವಲ್ಲದಿದ್ದರೂ ಮಧ್ಯಮ ವಯಸ್ಸಿನದಾಗಿದೆ) ಎಷ್ಟು ಖ್ಯಾತಿಯನ್ನು ಹೊಂದಿದೆಯೆಂದರೆ ಇಲ್ಲಿ ಅದರ ಚರ್ಚೆ ಕೂಡ ಅಗತ್ಯವಿಲ್ಲ. ಆರ್ಥಿಕ ಇತಿಹಾಸಕಾರರಲ್ಲಿ ಕೂಡ ಮೊದಲು ಉತ್ಪಾದನೆಯ ಮೇಲಿದ್ದ ಕಾಳಜಿಯು ಈಗ ಉಪಭೋಗದ ಕಡೆಗೆ ತಿರುಗಿದೆ. ಈ ಬೆಳವಣಿಗೆಯಿಂದಾಗಿ ಆರ್ಥಿಕತೆಯನ್ನು ಇತಿಹಾಸದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದಿಂದ ಪ್ರತ್ಯೇಕಿಸುವುದೇ ದುಸ್ತರವಾಗತೊಡಗಿದೆ. 'ನಿರ್ವಹಣಾ ಇತಿಹಾಸವು' ಮತ್ತೊಂದು ಹೊಸ ಆಸಕ್ತಿಯ ಕ್ಷೇತ್ರವಾಗಿದೆ. ಆದರೆ ಅದು ಆರ್ಥಿಕ ಹಾಗೂ ಆಡಳಿತಾತ್ಮಕ ಇತಿಹಾಸಗಳ ನಡುವಿನ ಸರಹದ್ದನ್ನು ಸಮಾಪ್ತಗೊಳಿಸದಿದ್ದಲ್ಲಿ ಅಸ್ಪಷ್ಟವೆನಿಸುತ್ತದೆ. ಇಂದು 'ಪರಿಸರದ ಇತಿಹಾಸ' ಅಥವಾ 'ಇಕೊ ಹಿಸ್ಟರಿ' ಎಂಬ ಅತ್ಯುತ್ಸಾಹೀ, ಮಹತ್ವಾಕಾಂಕ್ಷೀ ಪ್ರಯತ್ನವು ಆರ್ಥಿಕ ಇತಿಹಾಸವನ್ನು ಸ್ವಾಧೀನಪಡಿಸಿಕೊಳ್ಳುವ ಅಪಾಯವು ಎದುರಾಗಿದೆ.

ರಾಜಕೀಯ ಇತಿಹಾಸವು ಕೂಡ ತಥಾಕಥಿತ (so called) 'ಉಚ್ಚ' ಮತ್ತು 'ನಿಮ್ನ' ಎಂದು ಗುರುತಿಸಲಾಗುವ ಪರಂಪರೆಗಳಾಗಿ ವಿಭಾಗವಾಗಿದೆಯಷ್ಟೇ ಅಲ್ಲದೆ ಸರ್ಕಾರದ ಕೇಂದ್ರಗಳು ಹಾಗೂ ನಿಮ್ನ ಸ್ತರದ ರಾಜಕೀಯದಲ್ಲಿ ಆಸಕ್ತರಾದ ಇತಿಹಾಸಕಾರರ ನಡುವೆಯೂ ವಿಭಜಿತಗೊಂಡಿದೆ. ರಾಜಕೀಯ ಇತಿಹಾಸಕಾರರು ಕಾರ್ಖಾನೆ, ಶಾಲೆ, ಅಥವಾ ಕುಟುಂಬದ ಹಂತಗಳಲ್ಲೂ ಅಧಿಕಾರಕ್ಕಾಗಿ ನಡೆವ ಹೋರಾಟಗಳನ್ನು (ಮೈಕೆಲ್ ಫೂಕೋನಂಥ ಸಿದ್ಧಾಂತಿಗಳನ್ನು ಅನುಸರಿಸಿ) ಚರ್ಚಿಸುವುದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಆ ಅರ್ಥದಲ್ಲಿ ರಾಜಕೀಯ ಪರಿಕಲ್ಪನೆಯ ಸೀಮೆಯು ಕೂಡ ವಿಸ್ತಾರವಾಗಿದೆ. ಅಂಥ ವಿಸ್ತರಣೆಯ ಫಲವಾಗಿ ಒಂದು ರೀತಿಯ ಅಸ್ಮಿತೆಯ ಬಿಕ್ಕಟ್ಟು ಕೂಡ ಹುಟ್ಟಿಕೊಂಡಿದೆ. ಮಾನವ ಸಮಾಜದಲ್ಲಿ ರಾಜಕೀಯವು ಸರ್ವವ್ಯಾಪಿಯಾಗಿದ್ದ ಪಕ್ಷದಲ್ಲಿ ರಾಜಕೀಯ ಇತಿಹಾಸವೆಂಬ ಪ್ರತ್ಯೇಕ ಶಾಖೆಯ ಅಗತ್ಯವೇನಿದೆ? ಇಂಥದ್ದೇ ಸಮಸ್ಯೆಯು ಸಾಂಸ್ಕೃತಿಕ ಇತಿಹಾಸಕಾರರನ್ನೂ ಬಾಧಿಸುತ್ತಲಿದೆ. ಏಕೆಂದರೆ ಅವರು ಕಲೆ, ಸಾಹಿತ್ಯ, ಸಂಗೀತವೇ ಮುಂತಾದವುಗಳ ನಿಟ್ಟಿನ ಸಂಸ್ಕೃತಿಯ ಸಂಕೀರ್ಣ ಆದರೆ ನಿರ್ದಿಷ್ಟ ವ್ಯಾಖ್ಯಾನಗಳಿಂದ ದೂರಸರಿದು ಈ ಕ್ಷೇತ್ರದ ಹೆಚ್ಚು ಮಾನವಶಾಸ್ತ್ರೀಯ ಪರಿಭಾಷೆಯತ್ತ ಹೊರಳುತ್ತಾರೆ. ನಮ್ಮ ಕಾಲವನ್ನು 'ಐತಿಹಾಸಿಕ ಪ್ರಜ್ಞೆಯ ಅಥವಾ ಐತಿಹಾಸಿಕ ವಿಧಾನದ ಬಿಕ್ಕಟ್ಟಿನ' ಕಾಲವೆಂದು ಹೇಳಲು ಇದೂ ಒಂದು ಕಾರಣವಾಗಿದೆ. (ಇತರ ಕಾರಣಗಳನ್ನು ಈ ಅಧ್ಯಾಯದ 'ಆಧುನಿಕೋತ್ತರ ವಾದ' ಎಂಬ ಭಾಗದಲ್ಲಿ ಪ್ರಸ್ತುತಪಡಿಸಲಾಗಿದೆ).

ಇಂಥ ಹಿಗ್ಗುತ್ತಿರುವ ಹಾಗೂ ವಿಚ್ಛಿದ್ರಗೊಳ್ಳುತ್ತಿರುವ ಲೋಕದಲ್ಲಿ ದಿಕ್ಕು ತೋರಿಸುವ ಕೆಲಸದ ಅಗತ್ಯವು ಕೂಡ ಹೆಚ್ಚಾಗುತ್ತಿದೆ. ತಥಾಕಥಿತ 'ಹೊಸ ಇತಿಹಾಸ' ಎಂದರೇನು? ಅದೆಷ್ಟು ಹೊಸದು? ಅದು ತಾತ್ಕಾಲಿಕ ವ್ಯಾಮೋಹವೆ ಅಥವಾ

ದೀರ್ಘಕಾಲೀನ ಒಲವೆ? ಅದು ಪಾರಂಪರಿಕ ಇತಿಹಾಸದ ಸ್ಥಾನವನ್ನು ತುಂಬಬಹುದೆ ಅಥವಾ ತುಂಬಬೇಕೆ? ಅಥವಾ ಎದುರಾಳಿಗಳಿಬ್ಬರೂ ಶಾಂತಿಯುತ ಸಹಅಸ್ತಿತ್ವ(coexistance) ಸಾಧ್ಯವೆ?

ಪ್ರಸ್ತುತ ಸಂಪುಟವು ಈ ಪ್ರಶ್ನೆಗಳನ್ನು ಉತ್ತರಿಸಲಿಕ್ಕಾಗಿ ವಿನ್ಯಾಸಗೊಂಡಿದೆ. ಸಮಕಾಲೀನ ಇತಿಹಾಸದ ವೈವಿಧ್ಯತೆಗಳ ಸಮಗ್ರ ವೀಕ್ಷಣೆಯನ್ನು ಕೈಗೊಂಡಾಗ ತೋರಿಕೆಯ ಚರ್ಚೆಗಿಂತಲೂ ಹೆಚ್ಚಿನದಕ್ಕೆ ಅವಕಾಶವಿರುವುದಿಲ್ಲ. ಹಾಗಾಗಿ ಕೆಲವು ಇತ್ತೀಚೆಗಿನ ಚಳವಳಿಗಳಿಗಷ್ಟೇ ಗಮನವನ್ನು ಕೇಂದ್ರೀಕರಿಸಬೇಕೆಂದು ನಿರ್ಣಯಿಸಲಾಗಿದೆ. ಇಂಥ ಚಳವಳಿಗಳ ಕುರಿತ ಲೇಖನಗಳು ಸೂಚ್ಯವಾಗಿಯಾದರೂ ಅವೇ ಮೂಲಭೂತ ಸಮಸ್ಯೆಗಳ ಕುರಿತೇ ಇವೆ. ಪ್ರಾರಂಭದಲ್ಲೇ ಇಂಥ ಸಮಸ್ಯೆಗಳನ್ನು ಎದುರಿಸಿ ಇತಿಹಾಸದ ಬರವಣಿಗೆಯ ದೀರ್ಘಕಾಲೀನ ಬದಲಾವಣೆಗಳ ಸಂದರ್ಭದಲ್ಲಿ ಅವನ್ನು ಗುರುತಿಸುವ ಕೆಲಸವು ಉಪಯುಕ್ತವಾದುದು.

ಹೊಸ ಇತಿಹಾಸ ಎಂದರೇನು?

'ಹೊಸ ಇತಿಹಾಸ' ಎಂಬ ನುಡಿಗಟ್ಟು ಫ್ರಾನ್ಸಿನಲ್ಲಿ ಸುಪ್ರಸಿದ್ಧವಾಗಿದೆ. La nouvelle histoire ಎಂಬುದು ಫ್ರೆಂಚ್ ಮಧ್ಯಕಾಲೀನ ಇತಿಹಾಸದ ಕುರಿತ ವಿಶೇಷಜ್ಞನಾದ ಜಾಕೂಸ್ ಲೆ ಗಾಫ್‌ನ ಲೇಖನಗಳ ಸಂಗ್ರಹದ ಶೀರ್ಷಿಕೆಯಾಗಿದೆ. ಲೆ ಗಾಫ್ ಮೂರು ಬೃಹತ್ ಸಂಪುಟಗಳ ಲೇಖನಗಳ ಸಂಗ್ರಹವನ್ನು ಸಂಪಾದಿಸುವಲ್ಲಿ ಕೂಡ ಕೈಜೋಡಿಸಿದ್ದನು. ಆ ಲೇಖನಗಳು 'ಹೊಸ ಸಮಸ್ಯೆಗಳು', ಹೊಸ ವಿಧಾನಗಳು', 'ಹೊಸ ಧ್ಯೇಯಗಳು' ಮುಂತಾದವುಗಳಿಗೆ ಸಂಬಂಧಿಸಿವೆ. ಈ ವಿಷಯಗಳಲ್ಲಿ 'ಹೊಸ ಇತಿಹಾಸ' ಎಂದರೇನು ಎಂಬುದು ಸ್ಪಷ್ಟವಾಗಿದೆ: ಇದು La nouvelle vague ಮತ್ತು Le nouveau roman ಎಂಬಂಥ ನುಡಿಗಟ್ಟುಗಳ ದೇಶವಾದ 'ಫ್ರಾನ್ಸಿನಲ್ಲಿ ರೂಪುಗೊಂಡ' ಇತಿಹಾಸ. La nouvelle cuisineನ್ನು ಹೇಳಬೇಕಾಗಿಯೇ ಇಲ್ಲ. ಇನ್ನೂ ನಿಖರವಾಗಿ ಹೇಳಬಹುದಾದರೆ ಇದು ecole des Annalesಗೆ ಸಂಬಂಧಿಸಿದ ಇತಿಹಾಸವೆನಿಸಿದ್ದು, Annales: economies, societes, civilisations ಎಂಬ ಪತ್ರಿಕೆಯ (1990ರ ದಶಕದಲ್ಲಿ Annales: histoire, sciences sociales ಎಂಬುದಾಗಿ ಇದರ ಹೆಸರನ್ನು ಬದಲಿಸಲಾಯಿತು) ನಿಟ್ಟಿನಲ್ಲಿ ಇದು ಸಮೂಹೀಕೃತಗೊಂಡಿದೆ,

ಈ ಹೊಸ ಇತಿಹಾಸ ಏನು? ಸಕಾರಾತ್ಮಕ ವ್ಯಾಖ್ಯಾನವು ಸುಲಭವಲ್ಲ. ತಾನು ವಿರೋಧಿಸುವ ವಿಷಯಗಳ ನಿಟ್ಟಿನಲ್ಲಿ ಮಾತ್ರವೇ ಆಂದೋಲನವು ಸಂಘಟಿತಗೊಂಡಿದೆ. ಮುಂಬರುವ ಪುಟಗಳು ಹೊಸ ವಿಧಾನಗಳ ವೈವಿಧ್ಯತೆಗಳನ್ನು ಪರಿಚಯಿಸಲಿವೆ. ಹಾಗಾಗಿ ಹೊಸ ಇತಿಹಾಸವನ್ನು ಸಮಗ್ರ ಇತಿಹಾಸ ಅಥವಾ ರಚನಾತ್ಮಕ ಇತಿಹಾಸವೆಂದು ಲಕ್ಷಣೀಕರಿಸುತ್ತ, ಅಸ್ಪಷ್ಟ ಚಿತ್ರಣಕ್ಕಿಂತಲೂ ಹೆಚ್ಚಿನದನ್ನು ನೀಡುವುದು ಕಷ್ಟದ ಕೆಲಸ. ದೇವರು ಎಂದರೇನು ಎಂಬುದನ್ನು ತಿಳಿಸುವ ಸಮಸ್ಯೆಯನ್ನು ಎದುರಿಸಿ, ನಕಾರಾತ್ಮಕ ಮಾರ್ಗವನ್ನು ಆಯ್ದುಕೊಂಡ ಮಧ್ಯಕಾಲೀನ ಧರ್ಮಶಾಸ್ತ್ರಜ್ಞರನ್ನು ನಾವು ಅನುಕರಿಸಬಹುದು. ಅಂದರೆ ಹೊಸ ಇತಿಹಾಸವು ಏನೆಂದು ತಿಳಿಸಲು ಅದು ಏನಲ್ಲ ಹಾಗೂ ಅದರ ಪ್ರತಿಪಾದಕರು ಏನನ್ನು ವಿರೋಧಿಸಿದರು ಎಂಬುದನ್ನು ತಿಳಿಸುವುದು.

ಹೊಸ ಇತಿಹಾಸವು ಪಾರಂಪರಿಕ 'ಮಾದರಿಯ' ವಿರುದ್ಧ, ಉದ್ದೇಶಪೂರ್ವಕ ಪ್ರತಿಕ್ರಿಯೆಯ ನಿಟ್ಟಿನಲ್ಲಿ ಬರೆದ ಇತಿಹಾಸವೆನಿಸಿದೆ. ಈ ಮಾದರಿ ಎಂಬ ಉಪಯುಕ್ತ ಆದರೆ ಅಸ್ಪಷ್ಟವಾದ ಪರಿಭಾಷೆಯನ್ನು ಪ್ರಚಲಿತದಲ್ಲಿ ತಂದವನು ಅಮೇರಿಕದ ವಿಜ್ಞಾನದ ಇತಿಹಾಸಕಾರನಾದ ಥಾಮಸ್ ಕುಹ್ನ್ ಎಂಬವನು.ಲಿಯೊಪೊಲ್ಡ್ ವೊನ್ ರಾಂಕೆ (1795-1886) ಜರ್ಮನಿಯ ಒಬ್ಬ ಮಹೋನ್ನತ ಇತಿಹಾಸಕಾರ. ಆತನು ಇದಕ್ಕೆ ತನ್ನ ಅನುಯಾಯಿಗಳಷ್ಟು ಬದ್ಧನಾಗಿಲ್ಲದಾಗ್ಯೂ, ಈ ಪಾರಂಪರಿಕ ಮಾದರಿಯನ್ನು 'ರಾಂಕೆಯ ಇತಿಹಾಸ' ಎಂಬುದಾಗಿ ವರ್ಣಿಸುವುದು ಅನುಕೂಲಕರ (ಮಾರ್ಕ್ಸ್ ಸ್ವತಃ ಹೇಗೆ ಮಾರ್ಕ್ಸ್ವಾದಿ ಆಗಿರಲಿಲ್ಲವೊ ಹಾಗೇ ರಾಂಕೆ ಕೂಡ ರಾಂಕೆವಾದಿಯಾಗಿರಲಿಲ್ಲ). ಈ ಮಾದರಿಯನ್ನು ನಾವು ಇತಿಹಾಸದ 'ಸಾಮಾನ್ಯ ಜ್ಞಾನ'ದ ದೃಷ್ಟಿಕೋನ ಎಂದೂ ಕರೆಯಬಹುದು. ಅದೇನೂ ಈ ಇತಿಹಾಸದ ಪ್ರಶಂಸೆಯಲ್ಲ. ಗತವನ್ನು ತಿಳಿದುಕೊಳ್ಳಲು ಸಾಧ್ಯವಿರಬಹುದಾದ ಅನೇಕ ವಿಧಗಳಲ್ಲಿ ಅದೂ ಒಂದು ಎಂಬ ತಿಳಿವಳಿಕೆಗಿಂತ ಸಾಮಾನ್ಯವಾಗಿ ಅದನ್ನೇ

ಇತಿಹಾಸವನ್ನು ನಿರ್ವಹಿಸುವ ವಿಧಾನ ಎಂಬಂತೆ ನಂಬಲಾಗಿದೆ. ಸರಳ ಮತ್ತು ಸ್ಪಷ್ಟತೆಗಾಗಿ ಹಳೆಯ ಮತ್ತು ಹೊಸ ಇತಿಹಾಸಗಳ ನಡುವಿನ ವ್ಯತ್ಯಾಸಗಳನ್ನು ಏಳು ಅಂಶಗಳ ಮೂಲಕ ಕ್ರೋಢೀಕರಿಸಬಹುದು.

1) ಪಾರಂಪರಿಕ ಮಾದರಿಯ ಪ್ರಕಾರ ಇತಿಹಾಸವು ಮೂಲಭೂತವಾಗಿ ರಾಜಕೀಯಕ್ಕೆ ಸಂಬಂಧಿಸಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ರೆಜಿಯಸ್ ಪ್ರೊಫೆಸರ್ ಆಗಿದ್ದ ಸರ್ ಜಾನ್ ಸೀಲೆಯ ಆತ್ಮವಿಶ್ವಾಸಪೂರ್ಣ ವಿಕ್ಟೋರಿಯನ್ ವಾಕ್ಯಾಂಶದ ಪ್ರಕಾರ 'ಇತಿಹಾಸವು ಗತಕಾಲದ ರಾಜಕೀಯ: ರಾಜಕೀಯವು ವರ್ತಮಾನದ ಇತಿಹಾಸ'. ರಾಜಕೀಯವು ಅನಿವಾರ್ಯವಾಗಿ ರಾಜ್ಯಕ್ಕೆ ಸಂಬಂಧಿಸಿದ್ದು ಎಂಬುದಾಗಿ ತಿಳಿಯಲಾಗಿತ್ತು. ಅದು ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದ್ದೇ ಹೊರತೂ ಸ್ಥಳೀಯ ಮಟ್ಟದ್ದಲ್ಲ. ಆದಾಗ್ಯೂ ಅದು ಚರ್ಚಿನ ಇತಿಹಾಸವನ್ನು ಒಂದು ಸಂಸ್ಥೆ ಎಂಬರ್ಥದಲ್ಲಿ ಒಳಗೊಂಡಿತ್ತು. ಹಾಗೂ ಮಿಲಿಟರಿ ವಿದ್ವಾಂಸನಾದ ಕಾರ್ಲ್ ವೊನ್ ಕ್ಲಾವ್ಸೆವಿಜ್ ವ್ಯಾಖ್ಯಾನಿಸಿದಂತೆ 'ಇತರ ಮಾಧ್ಯಮಗಳ ಮೂಲಕ ರಾಜಕೀಯದ ಮುಂದುವರಿಕೆ'ಯನ್ನು, ಬೇರೆ ಮಾತಿನಲ್ಲಿ ಹೇಳುವುದಾದರೆ, ಯುದ್ಧವನ್ನು ಒಳಗೊಂಡಿತ್ತು. ಕಲೆಯ ಇತಿಹಾಸ, ವಿಜ್ಞಾನದ ಇತಿಹಾಸ ಮುಂತಾದ ಅನ್ಯ ಪ್ರಕಾರದ ಇತಿಹಾಸಗಳನ್ನು ಪಾರಂಪರಿಕ ಮಾದರಿಯಿಂದ ಸಂಪೂರ್ಣ ಹೊರಗಿಟ್ಟಿರಲಿಲ್ಲವಾದರೂ ಅವು ನಿಜವಾದ ಇತಿಹಾಸಕಾರರ ಆಸಕ್ತಿಗಳಿಗೆ ಮುಖ್ಯವಾದವುಗಳಲ್ಲ ಎಂಬುದಾಗಿ ಮೂಲೆಗೊತ್ತಲ್ಪಟ್ಟಿದ್ದವು.

ಇದಕ್ಕೆ ವ್ಯತಿರಿಕ್ತವಾಗಿ ಹೊಸ ಇತಿಹಾಸವು ವಸ್ತುತಃ ಮಾನವನ ಪ್ರತಿಯೊಂದು ಚಟುವಟಿಕೆಯ ಕುರಿತೂ ಆಸಕ್ತಿವಹಿಸುತ್ತದೆ. ಜೆ.ಬಿ.ಎಸ್. ಹಾಲ್ಡೇನ್ ಎಂಬ ವಿಜ್ಞಾನಿಯು ಒಮ್ಮೆ 'ಪ್ರತಿಯೊಂದಕ್ಕೂ ಇತಿಹಾಸ ಇದೆ' ಎಂಬುದಾಗಿ ಬರೆದಿದ್ದ. ಅದರರ್ಥ ಪ್ರತಿ ವಿಷಯಕ್ಕೂ ಒಂದು ಗತವೆಂಬುದಿದೆ ಹಾಗೂ ಅದನ್ನು ಸೈದ್ಧಾಂತಿಕ ರೂಪದಲ್ಲಿ ಪುನರ್ರಚಿಸಿ ಉಳಿದ ಗತಕ್ಕೆ ಸಂಬಂಧಿಸುವುದು ಸಾಧ್ಯ. ಹೀಗಾಗಿ, ಅನಾಲ್ಸ್ ಇತಿಹಾಸಕಾರರಿಗೆ ಪ್ರಿಯವಾದ 'ಸಮಗ್ರ ಇತಿಹಾಸ' ಎಂಬ ಘೋಷಣೆ ರೂಪುಗೊಂಡಿತು. ಕಳೆದ 30 ವರ್ಷಗಳಲ್ಲಿ ಅದಕ್ಕೂ ಮೊದಲು ಇತಿಹಾಸವಿದೆಯೆಂದು ಆಲೋಚಿಸಿರದ ವಿಷಯಗಳನ್ನು ಕುರಿತ ಅನೇಕ ಉಲ್ಲೇಖನೀಯ ಇತಿಹಾಸಗಳನ್ನು ನಾವು ನೋಡಿದ್ದೇವೆ. ಉದಾಹರಣೆಗೆ ಬಾಲ್ಯ, ಸಾವು, ಹುಚ್ಚು, ವಾತಾವರಣ (ರಿಚರ್ಡ ಗ್ರೋವ್ ಅವರು ಅಧ್ಯಾಯ ಎರಡರಲ್ಲಿ ಚರ್ಚಿಸಿದ್ದಾರೆ), ವಾಸನೆಗಳು, ಕೊಳೆ ಮತ್ತು ಸ್ವಚ್ಛತೆ, ಹಾವಭಾವ, ದೇಹ (10ನೆಯ ಅಧ್ಯಾಯದಲ್ಲಿ ರಾಯ್ ಪೋರ್ಟರ್), ಸ್ತ್ರೀತ್ವ, (3ನೆಯ ಅಧ್ಯಾಯದಲ್ಲಿ ಜಾನ್ ಡಬ್ಲು ಸ್ಕಾಟ್), ವಾಚನ (7ನೆಯ ಅಧ್ಯಾಯದಲ್ಲಿ ರಾಬರ್ಟ್ ಡಾರ್ಟನ್), ಮಾತು, ಹಾಗೂ ಮೌನವನ್ನು ಕುರಿತು ಸಹ ಇತಿಹಾಸವಿದೆ. ಇದಕ್ಕೂ ಹಿಂದೆ ಯಾವುದನ್ನು ಬದಲಾವಣೆರಹಿತ ಎಂದು ಪರಿಗಣಿಸಲಾಗಿತ್ತೊ ಅದನ್ನು ಈಗ ಕಾಲ ಮತ್ತು ದೇಶಕ್ಕನುಗುಣವಾಗಿ ಬದಲಾಗುವ 'ಸಾಂಸ್ಕೃತಿಕ ರಚನೆ' ಎಂಬಂತೆ ನೋಡಲಾಗುತ್ತಿದೆ.

ಇಲ್ಲಿ ಇಂಗಿತವಾಗಿರುವ ಸಾಂಸ್ಕೃತಿಕ ಸಾಪೇಕ್ಷತೆಯ ಕುರಿತು ಒತ್ತು ನೀಡತಕ್ಕದ್ದು. ವಾಸ್ತವವು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನಿರ್ಮಿತವಾಗುವಂಥದ್ದು ಎಂಬ ವಿಚಾರವು ಹೊಸ ಇತಿಹಾಸದ ತಾತ್ವಿಕ ತಳಪಾಯವಾಗಿದೆ. ಈ ವಿಚಾರವನ್ನು ಹಾಗೂ ಊಹನವನ್ನು ಅನೇಕ ಸಾಮಾಜಿಕ ಇತಿಹಾಸಕಾರರು ಹಾಗೂ ಸಾಮಾಜಿಕ ಮಾನವಶಾಸ್ತ್ರಜ್ಞರು ಹಂಚಿಕೊಂಡಿದ್ದು, ಈ ಎರಡೂ ಅಧ್ಯಯನ ಶಾಸ್ತ್ರಗಳ ಸಮ್ಮಿಳನವನ್ನು ವಿವರಿಸಲು ಸಹಾಯಕವೆನಿಸಿದೆ. ಮುಂಬರುವ ಅಧ್ಯಾಯಗಳಲ್ಲಿ ಅನೇಕ ಬಾರಿ ಈ ವಿಷಯವನ್ನು ಉಲ್ಲೇಖಿಸಲಾಗಿದೆ. ಈ ಸಾಪೇಕ್ಷತೆಯು ಇತಿಹಾಸದಲ್ಲಿ ಯಾವುದು ಕೇಂದ್ರಸ್ಥವಾದುದು ಯಾವುದು ಪರಿಧೀಯ ಎಂಬ ಕುರಿತು ಇರುವ ಪಾರಂಪರಿಕ ವ್ಯತ್ಯಾಸವನ್ನೇ ಗೌಣಗೊಳಿಸುತ್ತಿದೆ.

2) ಎರಡನೆಯದಾಗಿ ಪಾರಂಪರಿಕ ಇತಿಹಾಸಕಾರರು ಇತಿಹಾಸ ಎಂದರೆ ಮೂಲಭೂತವಾಗಿ ಘಟನಾವಳಿಗಳ ಕಥನ ಎಂದು ಭಾವಿಸುತ್ತಾರೆ. ಆದರೆ ಹೊಸ ಇತಿಹಾಸವು ರಚನೆಗಳ ವಿಶ್ಲೇಷಣೆಗೆ ಹೆಚ್ಚಿನ ಕಾಳಜಿವಹಿಸಿದೆ. ಫರ್ನಾಂಡ್ ಬ್ರಾದೆಲ್ ಅವರ 'ಮೆಡಿಟರೇನಿಯನ್' ಕೃತಿಯು ಇತಿಹಾಸವನ್ನು ಕುರಿತ ನಮ್ಮ ಕಾಲದ ಅತ್ಯಂತ ಪ್ರಸಿದ್ಧ ಕೃತಿಗಳಲ್ಲೊಂದಾಗಿದೆ. ಅದು ಘಟನಾವಳಿಗಳ ಇತಿಹಾಸವನ್ನು ಇತಿಹಾಸ ಎಂಬ ಸಾಗರದ ಅಲೆಗಳ ಮೇಲಿನ ಬುರುಗಿಗಿಂತ ಹೆಚ್ಚಿನದಲ್ಲ ಎಂಬುದಾಗಿ

ತಿರಸ್ಕರಿಸುತ್ತದೆ. ಬ್ರಾದೆಲ್ ಪ್ರಕಾರ ದೀರ್ಘಕಾಲೀನ (la longue duree) ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳು ಹಾಗೂ ಅತ್ಯಂತ ದೀರ್ಘಕಾಲದ ಭೂ ಚಾರಿತ್ರಿಕ ಬದಲಾವಣೆಗಳು ನಿಜವಾಗಿಯೂ ಮಹತ್ವದವು. ಈ ದೃಷ್ಟಿಕೋನಕ್ಕೆ ವಿರುದ್ಧವಾಗಿ ಇತ್ತೀಚೆಗೆ ಕೆಲವು ಪ್ರತಿಕ್ರಿಯೆಗಳು ಬಂದಿವೆಯಾದರೂ, ಘಟನಾವಳಿಗಳನ್ನು ಈ ಹಿಂದಿನಂತೆ ಅಷ್ಟು ಸುಲಭವಾಗಿ ತಳ್ಳಿಹಾಕುತ್ತಿಲ್ಲವಾಗಿ, ನಾನಾ ಪ್ರಕಾರದ ರಚನೆಗಳ ಇತಿಹಾಸವನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುವುದು ಮುಂದುವರಿದಿದೆ.

3) ಮೂರನೆಯದಾಗಿ ಪಾರಂಪರಿಕ ಇತಿಹಾಸವು ಗತದ ಮೇಲ್ನೋಟವನ್ನು ಒದಗಿಸುತ್ತದೆ. ಅರ್ಥಾತ್ ಅದು ಯಾವಾಗಲೂ ಮಹಾ ಪುರುಷರ, ರಾಜನೀತಿಜ್ಞರ, ಯೋಧರ, ಹಾಗೂ ಕೆಲವೊಮ್ಮೆ ಚರ್ಚಿನ ಜನರ ಶ್ರೇಷ್ಠ ಕಾರ್ಯಗಳನ್ನು ಕೇಂದ್ರೀಕರಿಸುತ್ತದೆ. ಇತಿಹಾಸದ ನಾಟಕದಲ್ಲಿ ಉಳಿದ ಮಾನವರಿಗೆ ಅಲ್ಪರ ಪಾತ್ರವನ್ನು ನೀಡಲಾಗಿದೆ. ಈ ನಿಯಮವನ್ನು ಮುರಿದಾಗ ಬಂದ ಪ್ರತಿಕ್ರಿಯೆಗಳೇ ಈ ನಿಯಮದ ಅಸ್ತಿತ್ವವನ್ನು ತಿಳಿಸುತ್ತವೆ. ರಷಿಯಾದ ಮಹಾನ್ ಲೇಖಕ ಅಲೆಗ್ಝಾಂಡರ್ ಪುಷ್ಕಿನ್ ಒಂದು ರೈತ ಪ್ರತಿಭಟನೆಯ ಹಾಗೂ ಅದರ ನಾಯಕ ಪುಗಾಚೆವ್ ಕುರಿತು ಅಧ್ಯಯನ ನಡೆಸುತ್ತಿದ್ದಾಗ 'ಅಂಥ ಮನುಷ್ಯನಿಗೆ ಇತಿಹಾಸ ಇಲ್ಲ'ವೆಂಬುದು ಝಾರ್ ನಿಕೋಲಸ್ ಮಾಡಿದ ಟೀಕೆಯಾಗಿತ್ತು. 1950ರಲ್ಲಿ ಒಬ್ಬ ಬ್ರಿಟಿಷ್ ಇತಿಹಾಸಕಾರನು ಫ್ರೆಂಚ್ ಕ್ರಾಂತಿಯಲ್ಲಿನ ಒಂದು ಜನಪ್ರಿಯ ಚಳವಳಿಯ ಕುರಿತು ಪ್ರೌಢ ಪ್ರಬಂಧವನ್ನು ಬರೆದಾಗ ಅವನ ಪರೀಕ್ಷಕರಲ್ಲೊಬ್ಬರು, 'ಈ ದರೋಡೆಕೋರರ ಕುರಿತು ನೀನೇಕೆ ತಲೆಕೆಡಿಸಿಕೊಳ್ಳುತ್ತಿ?' ಎಂದು ಕೇಳಿದರು.

ಇದಕ್ಕೆ ಪ್ರತಿಯಾಗಿ ಅನೇಕ ಹೊಸ ಇತಿಹಾಸಕಾರರು 'ನಿಮ್ನ ಸ್ತರದ ಇತಿಹಾಸ'ದ ಕುರಿತು, ಅಂದರೆ ಸಾಮಾನ್ಯ ಜನರ ಅಭಿಪ್ರಾಯಗಳು ಹಾಗೂ ಸಾಮಾಜಿಕ ಬದಲಾವಣೆಯ ಕುರಿತ ಅವರ ಅನುಭವಗಳನ್ನು ಕುರಿತಂತೆ ಆಸಕ್ತರಾಗಿದ್ದಾರೆ. ಜನಸಾಮಾನ್ಯರ ಸಂಸ್ಕೃತಿಯ ಇತಿಹಾಸವು ಅಪಾರ ಆಸಕ್ತಿಯನ್ನು ಸೆಳೆದಿದೆ. ಚರ್ಚಿನ ಇತಿಹಾಸಕಾರರು ಅದರ ಇತಿಹಾಸವನ್ನು ತಳಮಟ್ಟದಿಂದ ಹಾಗೂ ಮೇಲ್ಮಟ್ಟದಿಂದ ಎರಡೂ ಪ್ರಕಾರದಲ್ಲಿ ಪರಿಶೀಲಿಸತೊಡಗಿದ್ದಾರೆ. ಬೌದ್ಧಿಕ ಇತಿಹಾಸಕಾರರು ಕೂಡ ಮಹಾನ್ ಕೃತಿಗಳಿಂದ, ಮಹಾನ್ ವಿಚಾರಗಳಿಂದ ಹಾಗೂ ಅವುಗಳಿಗೆ ಸಂವಾದಿಯಾದ ಮಹಾನ್ ವ್ಯಕ್ತಿಗಳಿಂದ ತಮ್ಮ ಲಕ್ಷ್ಯವನ್ನು ಸರಿಸಿ ಸಾಮುದಾಯಿಕ ಮನೋಭಾವನೆಗಳು, ಚರ್ಚೆಗಳು ಅಥವಾ 'ಭಾಷೆಗಳ' (ಉದಾಹರಣೆಗೆ ಪಂಡಿತ ಭಾಷೆ) ಅಥವಾ ಪ್ರವಚನಗಳ ಅಥವಾ ಸಾಮಾನ್ಯ ಕಾನೂನು ಭಾಷೆಯ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಿದ್ದಾರೆ.

4) ನಾಲ್ಕನೆಯದಾಗಿ ಪಾರಂಪರಿಕ ಮಾದರಿಯ ಪ್ರಕಾರ ಇತಿಹಾಸವು 'ದಾಖಲೆಗಳನ್ನು' ಆಧರಿಸಿರಬೇಕು. ಕಥನ ಆಕರಗಳ ಮಿತಿಗಳನ್ನು ತೋರಿಸಿಕೊಟ್ಟಿದ್ದು ರಾಂಕೆಯ ಶ್ರೇಷ್ಠ ಸಾಧನೆಗಳಲ್ಲೊಂದು. ಕಥನ ಆಕರಗಳನ್ನು ನಾವು 'ವೃತ್ತಾಂತ'ಗಳೆಂಬುದಾಗಿ ಕರೆಯೋಣ. ಹಾಗೂ ಲಿಖಿತ ಇತಿಹಾಸವು ಸರ್ಕಾರಗಳು ಮತ್ತು ಪತ್ರಾಗಾರಗಳಲ್ಲಿ ಸಂರಕ್ಷಿಸಲ್ಪಟ್ಟ ಅಧಿಕೃತ ದಾಖಲೆಗಳನ್ನಾಧರಿಸುವ ಅಗತ್ಯವನ್ನು ರಾಂಕೆ ಒತ್ತಿ ಹೇಳಿದ್ದರು. ಈ ಸಾಧನೆಯ ಫಲಶ್ರುತಿ ಎಂದರೆ ಇತರ ಪ್ರಕಾರದ ಆಧಾರಗಳು ನಿರ್ಲಕ್ಷ್ಯಕ್ಕೊಳಗಾದವು. ಬರವಣಿಗೆಯ ಶೋಧಕ್ಕಿಂತಲೂ ಪೂರ್ವದ ಇತಿಹಾಸವನ್ನು ಇತಿಹಾಸಪೂರ್ವ ಎಂದು ತಿರಸ್ಕರಿಸಲಾಯಿತು. ಆದರೆ ಈ ಥರದ ದಾಖಲೆಗಳ ಮಿತಿಯನ್ನು 'ನಿಮ್ನ ಸ್ತರದ ಇತಿಹಾಸ'ವೆಂಬ ಚಳವಳಿಯು ತೋರಿಸಿಕೊಟ್ಟಿತು. ಅಧಿಕೃತ ದಾಖಲೆಗಳು ಸಾಮಾನ್ಯವಾಗಿ ಅಧಿಕಾರಿಕ ದೃಷ್ಟಿಕೋನವನ್ನು ವ್ಯಕ್ತಗೊಳಿಸುತ್ತವೆ. ವಿರೋಧಿಗಳ ಹಾಗೂ ಬಂಡಾಯಗಾರರ ಧೋರಣೆಗಳನ್ನು ಮರುರೂಪಿಸಲು ಅಂಥ ದಾಖಲೆಗಳ ಜೊತೆಗೆ ಇತರ ಪ್ರಕಾರದ ದಾಖಲೆಗಳನ್ನು ಸೇರಿಸಿಕೊಳ್ಳಬೇಕು.

ಏನೇ ಆದರೂ ಇತಿಹಾಸಕಾರರು ತಮ್ಮ ಹಿಂದಿನವರಿಗಿಂತ ವೈವಿಧ್ಯಪೂರ್ಣವಾದ ಮನುಷ್ಯ ಚಟುವಟಿಕೆಗಳ ಕುರಿತು ಕಾಳಜಿ ಹೊಂದಿದ್ದ ಪಕ್ಷದಲ್ಲಿ ಅವರು ಹೆಚ್ಚು ವೈವಿಧ್ಯಪೂರ್ಣವಾದ ಪುರಾವೆಗಳನ್ನು ಪರೀಕ್ಷಿಸಬೇಕಾಗುತ್ತದೆ. ಅಂಥ ಕೆಲವು ಪುರಾವೆಗಳು ಮೌಖಿಕವಾಗಿರುತ್ತವೆ, ಕೆಲವು ದೃಶ್ಯರೂಪದಲ್ಲಿರುತ್ತವೆ. ಸಂಖ್ಯಾಶಾಸ್ತ್ರೀಯ ಪುರಾವೆಗಳೂ ಇವೆ: ವ್ಯಾಪಾರದ ಅಂಕಿಅಂಶಗಳು, ಜನಸಂಖ್ಯೆಯ ಅಂಕಿಅಂಶಗಳು, ಮತದಾನದ ಅಂಕಿಅಂಶಗಳು ಇತ್ಯಾದಿ. ಬಹುಶಃ 1950 ಹಾಗೂ 1960ರ ಕಾಲಾವಧಿಯು ಪರಿಮಾಣಾತ್ಮಕ ಇತಿಹಾಸದ ಪರ್ವಕಾಲವಾಗಿತ್ತು. ಆಗ ಕೆಲವು ಉತ್ಸಾಹಿಗಳು ಕೇವಲ ಪರಿಮಾಣಾತ್ಮಕ

ವಿಧಾನಗಳು ಮಾತ್ರವೇ ವಿಶ್ವಾಸಾರ್ಹವಾದವುಗಳು ಎಂಬುದಾಗಿ ಪ್ರತಿಪಾದಿಸಿದ್ದರು. ಅಂಥ ಪ್ರತಿಪಾದನೆಗಳಿಗೆ ಪ್ರತಿಕ್ರಿಯೆಗಳೂ ಬಂದಿವೆ ಹಾಗೂ ಕೆಲಮಟ್ಟಿಗೆ ಅವು ವಿಧಾನಗಳ ವಿರುದ್ಧವೂ ಕಂಡುಬಂದಿವೆ. ಅಷ್ಟಾಗಿಯೂ ಹೆಚ್ಚು ಸಮತೋಲಿತವಾದ ಪರಿಮಾಣಾತ್ಮಕ ಇತಿಹಾಸದ ಕುರಿತ ಆಸಕ್ತಿಯು ಕೂಡ ಬೆಳೆಯುತ್ತಲೇ ಇದೆ. ಉದಾಹರಣೆಗೆ 1987ರಲ್ಲಿ ಬ್ರಿಟನ್‌ನಲ್ಲಿ ಇತಿಹಾಸ ಮತ್ತು ಕಂಪ್ಯೂಟಿಂಗ್‌ಗಾಗಿ ಒಂದು ಸಂಘವು ಸ್ಥಾಪನೆಯಾಯಿತು.

5) ಆರ್ ಜಿ. ಕಾಲಿಂಗ್‌ವುಡ್ ಎಂಬ ದಾರ್ಶನಿಕ-ಇತಿಹಾಸಕಾರನು ಪಾರಂಪರಿಕ ಮಾದರಿಯ ಕುರಿತು ಹೇಳಿದ ಮುಂದಿನ ಮಾತುಗಳು ನೆನಪಿಡುವಂಥವು 'ಇತಿಹಾಸಕಾರನು "ಬ್ರುಟಸ್‌ನು ಸೀಝುರನನ್ನು ಏಕೆ ಇರಿದನು?" ಎಂಬ ಪ್ರಶ್ನೆಯನ್ನು ಕೇಳಿದಾಗ, "ಸೀಝುರನನ್ನು ಇರಿಯಬೇಕೆಂಬ ಯೋಚನೆ ಬ್ರುಟಸ್‌ನಿಗೆ ಏಕೆ ಬಂದಿತು" ಎಂಬುದು ಅದರ ಅರ್ಥ. ಈ ಐತಿಹಾಸಿಕ ವಿವರಣಾ ಮಾದರಿಯು ನಾನಾ ಆಧಾರಗಳ ನಿಟ್ಟಿನಲ್ಲಿ ಇತ್ತೀಚಿನ ಇತಿಹಾಸಕಾರರ ಟೀಕೆಗೆ ಗುರಿಯಾಗಿದೆ. ಬಹುಮುಖ್ಯವಾಗಿ ಇಂಥ ವಿವರಣೆಯು ಸಾಮೂಹಿಕ ಚಳವಳಿಗಳ, ವ್ಯಕ್ತಿಗತ ಕ್ರಿಯೆಗಳ ಹಾಗೂ ಪ್ರವೃತ್ತಿ ಮತ್ತು ಘಟನೆಗಳ ಕುರಿತು ಇತಿಹಾಸಕಾರರ ವೈವಿಧ್ಯಪೂರ್ಣ ಪ್ರಶ್ನೆಗಳಿಗೆ ಗಮನಹರಿಸಲು ಸೋಲುತ್ತದೆ.

ಉದಾಹರಣೆಗೆ, 16ನೆಯ ಶತಮಾನದ ಸ್ಪೇನಿನಲ್ಲಿ ಬೆಲೆಯೇರಿಕೆ ಏಕಾಯಿತು? ಆರ್ಥಿಕ ಇತಿಹಾಸಕಾರರಿಗೆ ಈ ಪ್ರಶ್ನೆಯ ಉತ್ತರದ ಬಗ್ಗೆ ಸಹಮತಿಯಿಲ್ಲ. ಆದರೆ, ಅವರ ವಿವಿಧ ಪ್ರತಿಕ್ರಿಯೆಗಳು (ಬೆಳ್ಳಿಯ ಆಮದು, ಜನಸಂಖ್ಯಾ ಹೆಚ್ಚಳ. ಇತ್ಯಾದಿ.) ಕಾಲಿಂಗ್‌ವುಡ್ ಮಾದರಿಯ ಹತ್ತಿರವೂ ಸುಳಿಯುವುದಿಲ್ಲ ಎಂಬುದಂತೂ ನಿಜ. ಹದಿನಾರನೆಯ ಶತಮಾನದ ಮೆಡಿಟರೇನಿಯನ್ ಬಗ್ಗೆ 1949ರಲ್ಲಿ ಮೊದಲ ಬಾರಿ ಪ್ರಕಟವಾದಾಗ ಫರ್ನಾಂಡ್ ಬ್ರಾದೆಲ್ ಅವರ ಸುಪ್ರಸಿದ್ಧ ಅಧ್ಯಯನದಲ್ಲಿ, ಮೂರನೆಯ ಹಾಗೂ ಕೊನೆಯ ಭಾಗವು ಮಾತ್ರ ಘಟನಾವಳಿಗಳ ಇತಿಹಾಸಕ್ಕೆ ಮೀಸಲಾಗಿದ್ದು, ಕಾಲಿಂಗ್‌ವುಡ್‌ನ ತರಹ ಪ್ರಶ್ನೆಗಳನ್ನು ಕೇಳಲಾಗಿದೆ. ಇಲ್ಲಿಯೂ ಸಹ ಕೃತಿಕಾರನು ತನ್ನ ನಾಯಕ, ಎರಡನೆಯ ಫಿಲಿಪ್ ರಾಜನಿಗಿದ್ದ ಮಿತಿಗಳು, ಹಾಗೂ ತನ್ನ ಕಾಲದ ಇತಿಹಾಸವನ್ನು ಪ್ರಭಾವಿಸುವಲ್ಲಿ ಆತನ ಅಸಾಮರ್ಥ್ಯಕ್ಕೆ ಒತ್ತು ನೀಡಿ ಅತ್ಯಂತ ವಿಭಿನ್ನ ರೀತಿಯ ಉತ್ತರವನ್ನು ನೀಡುತ್ತಾನೆ.

6)ಪಾರಂಪರಿಕ ಮಾದರಿಯ ಪ್ರಕಾರ ಇತಿಹಾಸವು ವಸ್ತುನಿಷ್ಠವಾದುದು. ಇತಿಹಾಸಕಾರನ ಕೆಲಸವೆಂದರೆ ಓದುಗರಿಗೆ ತಥ್ಯಗಳನ್ನು ನೀಡುವುದು ಅಥವಾ ರಾಂಕೆಯ ಬಹು ಉಲ್ಲೇಖಿತ ಹೇಳಿಕೆಯಂತೆ 'ಅದು ವಾಸ್ತವಿಕವಾಗಿ ಹೇಗೆ ನಡೆಯಿತು' ಎಂಬುದನ್ನು ತಿಳಿಸುವುದು. ದಾರ್ಶನಿಕ ಉದ್ದೇಶಗಳ ನಿಟ್ಟಿನ ಆತನ ಅಸ್ವೀಕರಣವನ್ನು ಭಾವೀ ಪೀಳಿಗೆಯು ಪೂರ್ವಗ್ರಹರಹಿತ ಇತಿಹಾಸದ ಗೌರವಪೂರ್ಣ ನಿಲುವರಿಕೆ (manifesto) ಎಂಬುದಾಗಿ ವ್ಯಾಖ್ಯಾನಿಸಿದೆ. 1902ರಿಂದ ಪ್ರಕಟವಾದ ಕ್ಯಾಂಬ್ರಿಜ್ ಮಾಡರ್ನ ಇತಿಹಾಸ ಸಂಪುಟಕ್ಕೆ ಲಾರ್ಡ್ ಆಕ್ಟನ್ ಸಂಪಾದಕನಾಗಿದ್ದನು. ಅವನು ತನ್ನ ಸಂಪುಟದ ಅಂತರ್ರಾಷ್ಟ್ರೀಯ ವಿದ್ವಾಂಸರ ಪಡೆಗೆ ಬರೆದ ಸುಪ್ರಸಿದ್ಧವಾದ ಪತ್ರದಲ್ಲಿ ಅವರಿಗೆ ' ಫ್ರೆಂಚ್ ಹಾಗೂ ಇಂಗ್ಲಿಷ್, ಜರ್ಮನ್ ಹಾಗೂ ಡಚ್ಚರನ್ನು ಒಂದೇ ರೀತಿಯಲ್ಲಿ ತೃಪ್ತಿಪಡಿಸುವುದು ನಮ್ಮ ವಾಟರ್ಲೂ ಆಗಿರಬೇಕು'. ಹಾಗೂ ಓದುಗರಿಗೆ ಎಲ್ಲಿ ಒಬ್ಬ ಇತಿಹಾಸಕಾರ ತನ್ನ ಲೇಖನಿಯನ್ನು ನಿಲ್ಲಿಸಿದ ಹಾಗೂ ಮತ್ತೊಬ್ಬ ಅದನ್ನು ಎತ್ತಿಕೊಂಡ ಎಂಬುದು ಗೊತ್ತಾಗಕೂಡದು ಎಂಬುದಾಗಿ ತಾಕೀತು ಮಾಡಿದ್ದ.

ಇಂದು ಸಾಮಾದನ್ಯವಾಗಿ, ಈ ಆದರ್ಶವನ್ನು ಅವಾಸ್ತವಿಕ ಎಂಬುದಾಗಿ ಪರಿಗಣಿಸಲಾಗುತ್ತದೆ. ವರ್ಣ, ಮತ, ವರ್ಗ ಅಥವಾ ಲಿಂಗಗಳ ಕುರಿತ ಪೂರ್ವಗ್ರಹವನ್ನು ಮೀರಲು ನಾವೆಷ್ಟೇ ಸಂಘರ್ಷಿಸಿದರೂ ಗತಕಾಲವನ್ನು ಒಂದು ನಿರ್ದಿಷ್ಟ ದೃಷ್ಟಿಕೋನದಿಂದ ನೋಡುವುದರಿಂದ ನಾವು ತಪ್ಪಿಸಿಕೊಳ್ಳಲಾರೆವು. ಸಾಂಸ್ಕೃತಿಕ ಸಾಪೇಕ್ಷತಾವಾದವು ಇತಿಹಾಸದ ಬರವಣಿಗೆಗೇ ಸ್ವತಃ ಅನ್ವಯವಾಗುತ್ತದೆ. ನಮ್ಮ ಮನಸ್ಸುಗಳು ವಾಸ್ತವವನ್ನು ನೇರವಾಗಿ ಪ್ರತಿಬಿಂಬಿಸಲಾರವು; ನಾವು ಜಗತ್ತನ್ನು ನಮ್ಮ ಪರಂಪರೆಗಳು, ವಿನ್ಯಾಸಗಳು ಹಾಗೂ ರೂಢಿಗಳ ಚೌಕಟ್ಟುಗಳನ್ನು ಬಿಟ್ಟು ನೋಡಲಾರೆವು. ಪರಿಸ್ಥಿತಿ ಹೀಗಿರುವಾಗ ಸಂಘರ್ಷಗಳನ್ನು ಕುರಿತ ನಮ್ಮ ಗ್ರಹಿಕೆಯು ವಿರುದ್ಧ ದೃಷ್ಟಿಕೋನಗಳ ಪ್ರಸ್ತುತಿಯ ಮೂಲಕ ವಿಸ್ತಾರವಾಗುತ್ತದೆಯೇ ಹೊರತು,

ಸಹಮತಿಯನ್ನು ಅಭಿವ್ಯಕ್ತಿಸುವ ಪ್ರಯತ್ನದಿಂದಲ್ಲ. ನಾವು ಇತಿಹಾಸದ ಆ ಏಕಮೇವ ಧ್ವನಿಯ ಆದರ್ಶದಿಂದ ಹೊರಬಂದು 'ವಿವಿಧ ಹಾಗೂ ವಿರುದ್ಧ ಧ್ವನಿಗಳು' ಎಂಬುದಾಗಿ ಗುರುತಿಸುವ 'ಹೆಟೆರೊಗ್ಲಾಸಿಯಾ'ದತ್ತ ಚಲಿಸಿದ್ದೇವೆ. ಈ ಕಾರಣದಿಂದ ಪ್ರಸ್ತುತ ಸಂಪುಟವು ಒಂದು ಸಾಮೂಹಿಕ ಕೃತಿಯ ಸ್ವರೂಪವನ್ನು ಪಡೆದುಕೊಳ್ಳುವುದು ಹಾಗೂ ಇಲ್ಲಿನ ಲೇಖಕರು ವಿಭಿನ್ನ ಮಾತೃಭಾಷೆಗಳ ಮೂಲಕ ಮಾತನಾಡುವುದು ಸೂಕ್ತವಾದುದು.

7) ರಾಂಕೆಯ ಇತಿಹಾಸವು ವೃತ್ತಿಪರರ ವಲಯವಾಗಿತ್ತು. ವಿಶ್ವವಿದ್ಯಾಲಯಗಳಲ್ಲಿನ ವಿಭಾಗಗಳೊಂದಿಗೆ ಮತ್ತು ಅದರ Historische Zeitschrift ಮತ್ತು English Historical Reviewನಂತಹ ನಿಯತಕಾಲಿಕೆಗಳೊಂದಿಗೆ 19ನೆಯ ಶತಮಾನದಲ್ಲಿ ಇತಿಹಾಸವು ವೃತ್ತಿಪರವಾಯಿತು. ಮುಂಚೂಣಿ ಹೊಸ ಇತಿಹಾಸಕಾರರಲ್ಲಿ ಬಹತೇಕರು ವೃತ್ತಿಪರರೇ. ಬಹುಶಃ ಒಂದು ವಿಶಿಷ್ಟ ಅಪವಾದವೆಂದರೆ ಫಿಲಿಪ್ ಅರೀಸ್. ಅವರು ತಮ್ಮನ್ನು 'ಭಾನುವಾರದ ಇತಿಹಾಸಕಾರ' ಎಂದು ಕರೆದುಕೊಳ್ಳಲು ಇಷ್ಟಪಡುತ್ತಿದ್ದರು. ಅನಾಲ್ಸ್ ಗುಂಪಿನವರು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸಗಳು ರಾಂಕೆಯು ರಾಜಕೀಯ ಇತಿಹಾಸಕ್ಕೆ ರೂಪಿಸಿದ ವೃತ್ತಿಪರ ಮಾನದಂಡಕ್ಕೆ ಸಾಟಿಯಾಗಬಲ್ಲವು ಎಂಬುದನ್ನು ತೋರಿಸಿದರು. ಇದು ಅನಾಲ್ಸ್ ಗುಂಪಿನ ಸಾಧನೆ.

ಅದೇ ವೇಳೆಗೆ ಮನುಷ್ಯನ ಸಮಸ್ತ ಚಟುವಟಿಕೆಗಳ ಕುರಿತ ಅವರ ಕಾಳಜಿಯು ಅಂದರೆ ಅವರು ಸಾಮಾಜಿಕ ಮಾನವಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ಸಾಹಿತ್ಯ ವಿಮರ್ಶಕರು, ಮನಶ್ಯಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಮುಂತಾದವರಿಂದ ಕಲಿಯುವ ಹಾಗೂ ಅವರೊಂದಿಗೆ ಸಹಯೋಗವನ್ನು ನೀಡುವ ನಿಟ್ಟಿನಲ್ಲಿ, ಹೊಸ ಇತಿಹಾಸಕಾರರನ್ನು ಅಂತಃವಿಷಯಿಗಳಾಗಲು ಪ್ರೋತ್ಸಾಹಿಸಿತು. ತಮ್ಮ ಆಸಕ್ತಿಯನ್ನು ಮುಖ್ಯವಾಹಿನಿಯ ಇತಿಹಾಸಕಾರರಿಂದ ಹೆಚ್ಚು ಕಡಿಮೆ ಪ್ರತ್ಯೇಕವಾಗಿ ಮುಂದುವರಿಸುತ್ತಿದ್ದ ಕಲೆಯ, ಸಾಹಿತ್ಯದ ಹಾಗೂ ವಿಜ್ಞಾನದ ಇತಿಹಾಸಕಾರರು ಈಗ ಅವರ ಜೊತೆಗೆ ಹೆಚ್ಚು ನಿಯಮಿತವಾಗಿ ಸಂಪರ್ಕಿಸತೊಡಗಿದರು. ನಿಮ್ನ ಸ್ತರದ ಇತಿಹಾಸ ಚಳವಳಿಯು ಕೂಡ ಗತವನ್ನು ಕುರಿತ ಸಾಮಾನ್ಯ ಜನರ ದೃಷ್ಟಿಕೋನವನ್ನು ವೃತ್ತಿಪರ ಇತಿಹಾಸಕಾರರಿಗಿಂತ ಹೆಚ್ಚು ಗಂಭೀರವಾಗಿ ಪರಿಗಣಿಸುವ ಹೊಸ ದೃಢ ನಿಶ್ಚಯವನ್ನು ಬಿಂಬಿಸುತ್ತದೆ. ಕೆಲ ಪ್ರಕಾರದ ಮೌಖಿಕ ಇತಿಹಾಸದ ಕುರಿತೂ ಇದೆ ಮಾತು ಅನ್ವಯವಾಗುತ್ತದೆ. ಈ ಅರ್ಥದಲ್ಲೂ ಹೆಟೆರೊಗ್ಲಾಸಿಯಾವು ಹೊಸ ಇತಿಹಾಸಕ್ಕೆ ಅಗತ್ಯವಾಗಿದೆ.

**ಹೊಸ ಇತಿಹಾಸವು ಎಷ್ಟು ಹೊಸದು?**

ಹೊಸ ಇತಿಹಾಸವನ್ನು ಆವಿಷ್ಕರಿಸಿದವರು ಅಥವಾ ಕಂಡುಹಿಡಿದವರು ಯಾರು? ಈ ನುಡಿಗಟ್ಟನ್ನು ಕೆಲವೊಮ್ಮೆ 1970-80ರ ಕಾಲದ ಬೆಳವಣಿಗೆಗಳಿಗೆ ಉಪಯೋಗಿಸಲಾಗುತ್ತದೆ. ಆ ಕಾಲದಲ್ಲಿ ಪಾರಂಪರಿಕ ಮಾದರಿಗೆ ಜಪಾನ್, ಭಾರತ, ಲ್ಯಾಟಿನ್ ಅಮೇರಿಕ ಹಾಗೂ ಇತರ ಭಾಗಗಳ ಇತಿಹಾಸಕಾರರನ್ನೊಳಗೊಂಡಂತೆ. ವಿಶ್ವದಾದ್ಯಂತ ಪ್ರತಿಕ್ರಿಯೆಗಳು ಬಂದವು. ಈ ಸಂಪುಟದ ಪ್ರಬಂಧಗಳು ಈ ಕಾಲದ ಮೇಲೆ ಕೇಂದ್ರಿತವಾಗಿವೆ. ಈ ಎರಡು ದಶಕಗಳಲ್ಲಿ ಇತಿಹಾಸದ ಬರವಣಿಗೆಯಲ್ಲಿ ಆದ ಅನೇಕ ಬದಲಾವಣೆಗಳು ದೀರ್ಘಕಾಲೀನ ಪ್ರವೃತ್ತಿಯ ಭಾಗವಾಗಿದೆ.

ಅನೇಕರ ಪಾಲಿಗೆ ಹೊಸ ಇತಿಹಾಸವು ಲುಸಿಯಾನ್ ಫೆಬ್ರ ಹಾಗೂ ಮಾರ್ಕ್ ಬ್ಲಾಕ್ ಅವರೊಂದಿಗೆ ಸಂಬದ್ಧವಾಗಿದೆ. ಇವರಿಬ್ಬರು ತಮ್ಮ ದೃಷ್ಟಿಕೋನವನ್ನು ಪ್ರಚುರಪಡಿಸಲು 1929ರಲ್ಲಿ Annales ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರ ನಂತರದ ತಲೆಮಾರಿನ ಫರ್ನಾಂಡ್ ಬ್ರಾದೆಲ್ ಕೂಡ ಈ ದೃಷ್ಟಿಯಿಂದ ಮುಖ್ಯನಾಗುತ್ತಾನೆ. ಇತಿಹಾಸವನ್ನು ನವೀಕರಿಸುವಲ್ಲಿ ಈ ವ್ಯಕ್ತಿಗಳು ಮುನ್ನಡೆಸಿದ ಚಳವಳಿಯ ಮಹತ್ವವನ್ನು ನಿರಾಕರಿಸುವುದು ಸುಲಭವಲ್ಲ. ಆದರೆ ರಾಂಕೆ ಅನುಯಾಯಿಗಳ ವಿರುದ್ಧ ಬಂಡಾಯವೆದ್ದವರಲ್ಲಿ ಅವರೊಬ್ಬರೇ ಇರಲಿಲ್ಲ. 1930ರ ದಶಕದಲ್ಲಿ ಬ್ರಿಟನ್ನಿನಲ್ಲಿ ಲೆವಿಸ್ ನ್ಯಾಮಿಯರ್ ಮತ್ತು ಆರ್. ಹೆಚ್. ಟಾವ್ನಿ ಅವರಿಬ್ಬರೂ ಘಟನೆಗಳ ಕಥನವನ್ನು ತಿರಸ್ಕರಿಸಿ ರಾಚನಿಕ ಇತಿಹಾಸವನ್ನು ಆಯ್ದುಕೊಂಡರು. ಜರ್ಮನಿಯಲ್ಲಿ 1900ರ ಸುಮಾರಿಗೆ ಕಾರ್ಲ್ ಲ್ಯಾಂಪ್ರಟ್ ಎಂಬುವವನು ಪಾರಂಪರಿಕ ಮಾದರಿಯ ವಿರುದ್ಧ ಸವಾಲೆಸೆದು ತನ್ನ ವೃತ್ತಿಯಲ್ಲಿ

ಅಪ್ರಸಿದ್ಧನಾದನು. ಈ ಸಮಯದಲ್ಲಿ, 'ಘಟನಾ-ಕೇಂದ್ರಿತ ಇತಿಹಾಸ' ಎಂಬ ತಿರಸ್ಕಾರಯುತ ನುಡಿಗಟ್ಟು ಚಾಲ್ತಿಯಲ್ಲಿ ಬಂದಿತ್ತು (ಬ್ರಾದೆಲ್, ಬ್ಲಾಕ್ ಅಥವಾ ಫೆಬ್ರ ಮುಂತಾದವರು ಕಾಣಿಸಿಕೊಳ್ಳುವುದಕ್ಕಿಂತ ಒಂದು ತಲೆಮಾರು ಮೊದಲೇ). ಫ್ರಾನ್ಸಿನ ಮಹಾನ್ ಸಮಾಜಶಾಸ್ತ್ರಜ್ಞನಾದ ಎಮಿಲ್ ಡರ್ಕೈಮ್ ಮತ್ತು Annales ಅನ್ನು ಪ್ರಭಾವಿಸಿದ ಅವನ'Annee Sociologique' ಎಂಬ ಸಂಶೋಧನಾ ಪತ್ರಿಕೆಯನ್ನು ಕೇಂದ್ರೀಕರಿಸಿದ್ದ ವಿದ್ವಾಂಸರ ಗುಂಪೊಂದರ ವಿಚಾರಗಳನ್ನು ಅದು ವ್ಯಕ್ತಪಡಿಸುತ್ತದೆ.

'ಹೊಸ ಇತಿಹಾಸ' ಎಂಬ ನುಡಿಗಟ್ಟಿಗೆ ಕೂಡ ಅದರದೇ ಆದ ಇತಿಹಾಸವಿದೆ. ಅದರ ಪ್ರಪ್ರಥಮ ಬಳಕೆಯು ನನಗೆ ಗೊತ್ತಿರುವಂತೆ 1912ರಿಂದ ಆಯಿತು. ಆ ವರ್ಷ ಅಮೇರಿಕಾದ ವಿದ್ವಾಂಸ ಜೇಮ್ಸ್ ಹಾರ್ವೆ ರಾಬಿನ್‌ಸನ್ ಎಂಬವನು ಈ ಹೆಸರಿನದೇ ಒಂದು ಕೃತಿಯನ್ನು ಪ್ರಕಟಿಸಿದನು. ಅದರ ವಿಷಯಗಳು ಶೀರ್ಷಿಕೆಗೆ ಒಪ್ಪುವಂತಿದ್ದವು. ರಾಬಿನ್‌ಸನ್ ಅದರಲ್ಲಿ 'ಮನುಷ್ಯನು ಭೂಮಿಯ ಮೇಲೆ ಉಗಮಿಸಿದಾಗಿನಿಂದ ಏನೇನು ಮಾಡಿದನು ಹಾಗೂ ಯೋಚಿಸಿದನು ಎಂಬುದರ ಕುರುಹು ಹಾಗೂ ಅವಶೇಷಗಳೆಲ್ಲವನ್ನೂ ಇತಿಹಾಸ ಒಳಗೊಳ್ಳುತ್ತದೆ' ಎನ್ನುತ್ತಾನೆ. ಅಂದರೆ ಅವನು ಸಮಗ್ರ ಇತಿಹಾಸವನ್ನು ನಂಬಿದ್ದನು. ವಿಧಾನಕ್ಕೆ ಸಂಬಂಧಿಸಿದಂತೆ ರಾಬಿನ್‌ಸನ್ ಹೇಳುವುದೇನೆಂದರೆ, 'ಮಾನವಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ಮನಶ್ಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ಮನುಕುಲದ ಕುರಿತು ಏನೇನು ಸಂಶೋಧನೆಗಳನ್ನು ಮಾಡಿದ್ದಾರೋ ಅವೆಲ್ಲವುಗಳನ್ನೂ ಹೊಸ ಇತಿಹಾಸವು ಉಪಯೋಗಿಸಿಕೊಳ್ಳುತ್ತದೆ'. ಈ ಕಾಲದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಹೊಸ ಇತಿಹಾಸದ ಚಳವಳಿಯು ಸಫಲವಾಗಲಿಲ್ಲ, ಆದರೆ ಈ ಸ್ಥಳೀಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡಾಗ ಇತ್ತೀಚೆಗೆ ಅಮೇರಿಕನ್ನರು ಅನಾಲ್ಸ್ ಇತಿಹಾಸದ ಕುರಿತು ಅತ್ಯುತ್ಸಾಹವನ್ನು ತೋರಿಸುವುದೇಕೆ ಎಂಬುದು ಅರ್ಥವಾಗುತ್ತದೆ.

1912 ಅಥವಾ 1900ರಲ್ಲೇ ನಾವು ನಿಲ್ಲಬೇಕಿಲ್ಲ. ಇತ್ತೀಚೆಗೆ ಕೆಲವರು ವಾದಿಸಿದಂತೆ ಹಳೆಯ ಇತಿಹಾಸವನ್ನು ಹೊಸ ಇತಿಹಾಸದಿಂದ ಬದಲಿಸುವುದು (ಹೆಚ್ಚು ವಸ್ತುನಿಷ್ಠ ಹಾಗೂ ಕಡಿಮೆ ಸಾಹಿತ್ಯಿಕ) ಇತಿಹಾಸ ಬರವಣಿಗೆಯ ಇತಿಹಾಸದಲ್ಲಿ ಪುನರಾವರ್ತಿತಗೊಳ್ಳುತ್ತದೆ. 19ನೆಯ ಶತಮಾನದಲ್ಲಿ ರಾಂಕೆ ಅನುಯಾಯಿಗಳು ಇಂಥ ಹೇಳಿಕೆಯನ್ನು ನೀಡಿದರು. ಜೀನ್ ಮೆಬಿಲೊನ್ ಎಂಬ ಬೆನೆಡಿಕ್ಟ್ ಪರಂಪರೆಯ ಮಹಾನ್ ವಿದ್ವಾಂಸನು 17ನೆಯ ಶತಮಾನದಲ್ಲಿ ಆಕರಗಳನ್ನು ವಿಮರ್ಶಿಸುವ ಹೊಸ ವಿಧಾನಗಳನ್ನು ರೂಪಿಸಿದನು. ಕ್ರಿಸ್ತನ ಹುಟ್ಟಿಗೂ 150 ವರ್ಷಗಳಷ್ಟು ಪೂರ್ವದಲ್ಲೇ ಪಾಲಿಬಸ್ ಎಂಬ ಗ್ರೀಕ್ ಇತಿಹಾಸಕಾರನು ತನ್ನ ಕೆಲವು ಸಹೋದ್ಯೋಗಿಗಳನ್ನು ಕೇವಲ ಮಾತಿನ ಚತುರರೆಂಬುದಾಗಿ ತಿರಸ್ಕರಿಸಿದ್ದನು. ಕಡೇ ಪಕ್ಷ ಮೊದಲ ಸಂದರ್ಭದಲ್ಲಂತೂ ಹೊಸತನವು ಪ್ರಜ್ಞಾಪೂರ್ವಕವಾಗಿತ್ತು. 1867ರಲ್ಲಿ ರಾಬರ್ಟ್ ಫ್ರುಯಿನ್ ಎಂಬ ದಚ್ ಇತಿಹಾಸಕಾರನು ವೈಜ್ಞಾನಿಕ ರಾಂಕಿಯನ್ ಇತಿಹಾಸದ ಸಮರ್ಥನೆಗಾಗಿ 'ದಿ ನ್ಯೂ ಹಿಸ್ಟಾರಿಯೋಗ್ರಫಿ' ಎಂಬ ಲೇಖನವನ್ನು ಪ್ರಕಟಿಸಿದನು.

ರಾಜಕೀಯ ಘಟನೆಗಳಿಗಿಂತಲೂ ವ್ಯಾಪಕವಾದ ಇತಿಹಾಸವನ್ನು ಬರೆಯುವ ಪ್ರಯತ್ನಗಳೂ ಬಹು ಹಿಂದಿನಿಂದಲೇ ಪ್ರಾರಂಭವಾಗಿವೆ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಜರ್ಮನಿ, ಬ್ರಿಟನ್ ಮತ್ತು ಇತರೆಡೆಗಳಲ್ಲಿ ಪ್ರಭುತ್ವದ ಇತಿಹಾಸಕ್ಕೆ ಪರ್ಯಾಯವಾಗಿ ಆರ್ಥಿಕ ಇತಿಹಾಸವು ಸ್ಥಾಪಿತವಾಗಿತ್ತು. 1860ರಲ್ಲಿ ಸ್ವಿಸ್ ವಿದ್ವಾಂಸ ಜೇಕಬ್ ಬರ್ಕಹಾರ್ಟ್ ಎಂಬವನು ದಿ ಸಿವಿಲೈಝೇಶನ್ ಆಫ್ ದಿ ರೆನೈಸಾನ್ಸ್ ಇನ್ ಇಟಲಿ ಎಂಬ ಗ್ರಂಥವನ್ನು ಪ್ರಕಟಿಸಿದನು. ಆ ಅಧ್ಯಯನವು ಘಟನೆಗಳ ಕಥನಕ್ಕಿಂತ ಸಾಂಸ್ಕೃತಿಕ ಇತಿಹಾಸ ಹಾಗೂ ಪ್ರವೃತ್ತಿಗಳ ವಿವರಣೆಯನ್ನು ಕೇಂದ್ರೀಕರಿಸಿತ್ತು. ಕಾರ್ಲ್ ಮಾರ್ಕ್ಸ್ ಅವನಲ್ಲದೇ 19ನೆಯ ಶತಮಾನದ ಸಮಾಜಶಾಸ್ತ್ರಜ್ಞರಾದ ಅಗಸ್ಟ ಕಾಮ್ಟ್ ಹಾಗೂ ಹರ್ಬರ್ಟ್ ಸ್ಪೆನ್ಸರ್ ಅಂತಹವರು ಇತಿಹಾಸದಲ್ಲಿ ತೀವ್ರ ಆಸಕ್ತಿ ಹೊಂದಿದ್ದರು. ಆದರೆ ಅವರಿಗೆ ವೃತ್ತಿಪರ ಇತಿಹಾಸಕಾರರ ಕುರಿತು ತಿರಸ್ಕಾರವಿತ್ತು. ಅವರು ಘಟನೆಗಳಲ್ಲಿ ಆಸಕ್ತರಾಗಿರಲಿಲ್ಲ, ಬದಲಾಗಿ ರಚನೆಗಳಲ್ಲಿ ಆಸಕ್ತಿ ಹೊಂದಿದ್ದರು. 'ಹೊಸ ಇತಿಹಾಸ'ವು ಅವರಿಗೆ ಋಣಿಯಾಗಿದೆ ಎಂಬುದು ಆಗಾಗ್ಗೆ ಗುರುತಿಸಲ್ಪಟ್ಟಿರುವುದಿಲ್ಲ.

ಇವರು ತಮ್ಮ ಪೂರ್ವಸೂರಿಗಳಿಗೆ ಋಣಿಯಾಗಿರಬೇಕೆಂಬುದನ್ನು ಬಹುಬಾರಿ ಗುರುತಿಸುವುದಿಲ್ಲ. ಅಂಥವರಲ್ಲಿ ಜ್ಞಾನೋದಯ ಯುಗದ ಇತಿಹಾಸಕಾರರಾದ ವೊಲ್ಟೇರ್, ಗಿಬ್ಬನ್, ರಾಬರ್ಟ್‌ಸನ್, ವಿಕೊ, ಮೋಸರ್ ಮುಂತಾದವರು ಇದ್ದಾರೆ. 18ನೆಯ ಶತಮಾನದಲ್ಲಿ ಹೊಸರೀತಿಯ ಇತಿಹಾಸವನ್ನು ಬರೆಯುವ ಒಂದು ಅಂತರ್‌ರಾಷ್ಟ್ರೀಯ ಚಳವಳಿಯೇ ನಡೆಯಿತು. ಈ ಇತಿಹಾಸವು ಸೈನ್ಯ ಮತ್ತು ರಾಜಕಾರಣದ ಘಟನೆಗಳಿಗೆ ಸೀಮಿತವಾಗದೇ ಕಾನೂನು, ವಾಣಿಜ್ಯ, ಒಂದು ಸಮಾಜದ ಯೋಚನಾಕ್ರಮ, ಅದರ ವರ್ತನೆಗಳು, ಪದ್ಧತಿಗಳು, ಹಾಗೂ 'ಯುಗದ ಸ್ಫೂರ್ತಿ' ಇತ್ಯಾದಿಗಳನ್ನೂ ಒಳಗೊಂಡಿತು. ನಿರ್ದಿಷ್ಟವಾಗಿ ಜರ್ಮನಿಯಲ್ಲಿ ಜಾಗತಿಕ ಇತಿಹಾಸದ ಕುರಿತು ಉತ್ಸಾಹಪೂರ್ಣ ಆಸಕ್ತಿಯಿತ್ತು. ಸ್ಕಾಟ್ ವ್ಯಕ್ತಿಯಾದ ವಿಲಿಯಮ್ ಅಲೆಕ್ಸಾಂಡರ್ ಮತ್ತು ಜರ್ಮನಿಯ ಗೊಟಿಂಗೆನ್ ವಿಶ್ವವಿದ್ಯಾಲಯದಲ್ಲಿ (18ನೆಯ ಶತಮಾನದ ಅಂತ್ಯದಲ್ಲಿ ಹೊಸ ಸಾಮಾಜಿಕ ಇತಿಹಾಸದ ಕೇಂದ್ರ) ಪ್ರೊಫೆಸರ್ ಆಗಿದ್ದ ಕ್ರಿಸ್ಟೋಫ್ ಮೈನರ್ಸ್ ಎಂಬವರು ಮಹಿಳೆಯರ ಇತಿಹಾಸದ ಕುರಿತ ತಮ್ಮ ಅಧ್ಯಯನಗಳನ್ನು ಪ್ರಕಟಿಸಿದರು.

ಈ ರೀತಿಯಾಗಿ ಈ ಸಂಪುಟದಲ್ಲಿ ಚರ್ಚಿಸಲಾದ ಪರ್ಯಾಯ ಇತಿಹಾಸಕ್ಕೆ ಸಾಕಷ್ಟು ದೀರ್ಘ ಹಿನ್ನೆಲೆಯಿದೆ (ಅದರ ಮುತ್ತಾತರುಗಳು ತಮ್ಮದೇ ಸಂತತಿಯನ್ನು ಗುರುತಿಸದಿರುವ ಸಾಧ್ಯತೆಯೂ ಇರಬಹುದು). ಹಾಗಾಗಿ ಅಸ್ತಿತ್ವವು ಅದರ ಹೊಸತನವಲ್ಲ, ಬದಲಾಗಿ ಅದನ್ನು ಅನುಸರಿಸುವವರು ಈಗ ಅಧಿಕ ಸಂಖ್ಯೆಯಲ್ಲಿದ್ದು, ಮೂಲೆಗುಂಪಾಗಲು ನಿರಾಕರಿಸುತ್ತಾರೆ.

ವ್ಯಾಖ್ಯೆಯ ಸಮಸ್ಯೆಗಳು

ಈ ಸಂಪುಟದ ಉದ್ದೇಶವು ಹೊಸ ಇತಿಹಾಸವನ್ನು ವೈಭವೀಕರಿಸುವುದಲ್ಲ (ಅದರ ಕೆಲವು ಪ್ರಕಾರಗಳು ಸೂಕ್ತ ಮತ್ತು ಅವಶ್ಯಕವೆಂಬುದು ಲೇಖನದಾತರ ಸಹಮತವಾಗಿದ್ದಾಗ್ಯೂ) ಬದಲಾಗಿ ಅದರ ಕ್ಷಮತೆ ಮತ್ತು ದೌರ್ಬಲ್ಯಗಳ ನಿಷ್ಕರ್ಷೆ. ಪಾರಂಪರಿಕ ಮಾದರಿಯ ಕೊರತೆಯ ಕುರಿತು ವ್ಯಾಪಕವಾಗಿ ಅರಿವು ಮೂಡಿದ ಕಾರಣದಿಂದ ಬದಲಾವಣೆಯ ಆಂದೋಲನವು ನಿರ್ಮಾಣವಾಗಿದೆ. ನಾವು ಇತಿಹಾಸಕಾರನ ಕೌಶಲ್ಯದ ಆಚೆಗೆ ವಿಶಾಲ ಜಗತ್ತಿನೊಳಗೆ ನಡೆಯುವ ಬದಲಾವಣೆಗಳನ್ನು ಗಮನಿಸದಿದ್ದರೆ ಈ ಕೊರತೆಯು ಅರ್ಥವಾಗುವುದಿಲ್ಲ. ಉದಾಹರಣೆಗೆ, 2 ಮತ್ತು 3ನೆಯ ಅಧ್ಯಾಯಗಳು ಸ್ಪಷ್ಟಪಡಿಸಿರುವಂತೆ ನಿರ್ವಸಾಹತೀಕರಣ ಮತ್ತು ಸ್ತ್ರೀವಾದಗಳೆಂಬ ಎರಡು ಚಳವಳಿಗಳು ಇತ್ತೀಚಿಗಿನ ಇತಿಹಾಸದ ಬರವಣಿಗೆಯ ಮೇಲೆ ಸ್ಪಷ್ಟವಾದ ಪ್ರಭಾವವನ್ನು ಬೀರಿವೆ. ಭವಿಷ್ಯದಲ್ಲಿ ಪರಿಸರವಾದೀ ಚಳವಳಿಯು ಇತಿಹಾಸ ಬರವಣಿಗೆಯ ರೀತಿಯ ಮೇಲೆ ಹೆಚ್ಚೆಚ್ಚು ಪ್ರಭಾವವನ್ನು ಬೀರಲಿದೆ.

ಖಂಡಿತವಾಗಿಯೂ ಅದು ಅನೇಕ ಅಧ್ಯಯನಗಳಿಗೆ ಸ್ಫೂರ್ತಿಯಾಗಿದೆ. 1949ರಲ್ಲಿ ಮೊದಲಬಾರಿಗೆ ಬ್ರಾದೆಲ್‌ನ ಪ್ರಸಿದ್ಧ ಏಕವಿಷಯಕ ಪ್ರಬಂಧ, ಮೆಡಿಟರೇನಿಯನ್ ಪ್ರಕಟವಾದಾಗ ಅದರಲ್ಲಿ ಭೂಮಿ, ಸಾಗರ, ಪರ್ವತ ಹಾಗೂ ದ್ವೀಪಗಳು ಮುಂತಾದ ಭೌತಿಕ ಪರಿಸರಕ್ಕೆ ನೀಡಿದ ಜಾಗದ ಪ್ರಮಾಣದಿಂದಾಗಿ ಗಮನವನ್ನು ಸೆಳೆದಿತ್ತು. ಆದರೆ 11ನೆಯ ಅಧ್ಯಾಯದಲ್ಲಿ ರಿಚರ್ಡ್ ಗ್ರೋವ್ ತೋರಿಸುವಂತೆ ಇಂದು ಬ್ರಾದೆಲ್‌ನ ಚಿತ್ರಣವು ಜಡವಾಗಿ ಕಾಣಿಸುತ್ತದೆ. ಏಕೆಂದರೆ ಪರಿಸರವು ಮನುಷ್ಯನ ಉಪಸ್ಥಿತಿಯಿಂದ ಯಾವ ರೀತಿಯಲ್ಲಿ ರೂಪಾಂತರಗೊಂಡಿತೆಂಬ ಸಂಗತಿಯನ್ನು (ಉದಾಹರಣೆಗೆ, ಬ್ರಾದೆಲ್‌ನ ಕೃತಿಯಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವ ಯುದ್ಧನೌಕೆಗಳ ನಿರ್ಮಾಣಕ್ಕಾಗಿ ನಡೆದಿರಬಹುದಾದ ಅರಣ್ಯನಾಶ) ಬ್ರಾದೆಲ್ ಗಂಭೀರವಾಗಿ ಪರಿಗಣಿಸಿರಲಿಲ್ಲ.

ಆಂತರಿಕ ಹಾಗೂ ಬಾಹ್ಯ ಕಾರಣಗಳಿಗಾಗಿ ಪಾರಂಪರಿಕ ಇತಿಹಾಸ ಬರವಣಿಗೆಯ ಪಾರಂಪರಿಕ ಮಾದರಿಯ ಬಿಕ್ಕಟ್ಟಿನ ಕುರಿತು ಮಾತನಾಡುವುದು ಅನುಚಿತವಾಗಲಾರದು. ಆದರೆ ಹೊಸ ಮಾದರಿಗೂ ಅದರದೇ ಸಮಸ್ಯೆಗಳಿವೆ: ವ್ಯಾಖ್ಯೆಯ ಸಮಸ್ಯೆ, ಆಕರಗಳ ಸಮಸ್ಯೆ, ವಿಧಾನದ ಸಮಸ್ಯೆ, ವಿವರಣೆಯ ಸಮಸ್ಯೆ. ಈ ಸಮಸ್ಯೆಗಳು ನಿರ್ದಿಷ್ಟ ಅಧ್ಯಾಯಗಳಲ್ಲಿ ಮರುಕಳಿಸುವುದಾದರೂ ಈ ಸಂದರ್ಭದಲ್ಲಿ ಅವೆಲ್ಲವುಗಳ ಕುರಿತು ಒಂದು ಸಂಕ್ಷಿಪ್ತ ಚರ್ಚೆಯನ್ನು ನೀಡುವುದು ಸೂಕ್ತ.

ವ್ಯಾಖ್ಯೆ ಏಕೆ ಸಮಸ್ಯೆಯಾಗುತ್ತದೆ ಎಂದರೆ ಹೊಸ ಇತಿಹಾಸಕಾರರು ಅಪರಿಚಿತ ವಲಯದೊಳಗೆ ನುಗ್ಗುತ್ತಿದ್ದಾರೆ. ಸಾಧಾರಣವಾಗಿ ಇತರ ಸಂಸ್ಕೃತಿಯ ಕುರಿತು ಅನ್ವೇಷಿಸುವವರು ಮಾಡಿದಂತೆ ತಾವು ನೋಡುವ ವಿಷಯದ ಕುರಿತು ನಕಾರಾತ್ಮಕವಾದ ಚಿತ್ರವನ್ನಿಟ್ಟುಕೊಂಡೇ ಪ್ರಾರಂಭಿಸುತ್ತಾರೆ. 'ಪೂರ್ವದ' ಇತಿಹಾಸವನ್ನು ಪಶ್ಚಿಮದ ಇತಿಹಾಸಕಾರರು ತಮ್ಮದೇ ವಿರುದ್ಧ ಬಿಂಬವೆಂಬಂತೆ ಗ್ರಹಿಸಿ ಮಧ್ಯ ಮತ್ತು ದೂರದ ಪ್ರಾಚ್ಯ, ಚೀನಾ, ಜಪಾನ್ ಮುಂತಾದವುಗಳ ನಡುವಿನ ವ್ಯತ್ಯಾಸಗಳನ್ನು ಅಳಿಸಿಹಾಕಿದರು. ಹೆಂಕ್ ವೆಸಲಿಂಗ್ 4ನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ, ಪಾಶ್ಚಿಮಾತ್ಯರು ಜಗತ್ತಿನ ಇತಿಹಾಸವನ್ನು ಸದಾ, ಪಶ್ಚಿಮ ಮತ್ತು ಉಳಿದವುಗಳ (west and the rest) ಸಂಬಂಧಗಳ ಅಧ್ಯಯನವೆಂಬುದಾಗಿ ಗ್ರಹಿಸಿ, ಏಶಿಯಾ ಮತ್ತು ಆಫ್ರಿಕಾ, ಏಶಿಯಾ ಮತ್ತು ಅಮೇರಿಕಾ, ಮುಂತಾದವರ ನಡುವಿನ ಪಾರಸ್ಪರಿಕ ಕ್ರಿಯೆಗಳನ್ನು ನಿರ್ಲಕ್ಷಿಸಿದರು. ಮತ್ತೆ, ಉಚ್ಛ ಸಂಸ್ಕೃತಿಯ ಜಾಗದಲ್ಲಿ 'ನಿಮ್ನ' ಸಂಸ್ಕೃತಿಯನ್ನಿಡುವುದರೊಂದಿಗೆ, ಮೇಲ್ಮಟ್ಟದ ಇತಿಹಾಸವನ್ನೇ ತಲೆಕೆಳಗಾಗಿ ಇಟ್ಟರೆ, ನಿಮ್ನ ಸ್ತರದ ಇತಿಹಾಸವಾಗುತ್ತದೆ ಎಂಬುದಾಗಿ ಪರಿಕಲ್ಪಿಸಿಕೊಂಡರು. ಆದರೆ ವಿದ್ವಾಂಸರು ತಮ್ಮ ಸಂಶೋಧನೆಯನ್ನು ನಡೆಸುವಾಗ ಈ ದ್ವಂದ್ವದ ಅಂತರ್ಗತ ಸಮಸ್ಯೆಗಳ ಕುರಿತು ಹೆಚ್ಚೆಚ್ಚು ಜಾಗೃತರಾಗುತ್ತಿದ್ದಾರೆ.

ಉದಾಹರಣೆಗೆ ಲೋಕಪ್ರಿಯ ಸಂಸ್ಕೃತಿಯು 'ಜನರ'ಸಂಸ್ಕೃತಿಯಾದರೆ ಜನರೆಂದರೆ ಯಾರು? ಪ್ರತಿಯೊಬ್ಬರೆ? ಬಡವರೆ? ಮಾರ್ಕ್ಸ್‌ವಾದಿ ಬುದ್ಧಿಜೀವಿ ಅಂಟೋನಿಯೋ ಗ್ರಾಂಶಿ ಕರೆದಂತೆ ಅವರು 'ಅಧೀನಸ್ಥ ವರ್ಗ'ವೆ? ಅನಕ್ಷರಸ್ಥರೆ? ಅವಿದ್ಯಾವಂತರೆ? ಆದರೆ ಒಂದು ಸಮಾಜದಲ್ಲಿ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಭಜನೆಗಳು ಕಡ್ಡಾಯವಾಗಿ ಹೊಂದಿಕೊಳ್ಳುತ್ತವೆ ಎಂಬುದಾಗಿ ನಾವು ಅಂದುಕೊಳ್ಳುವಂತಿಲ್ಲ. ಹಾಗೂ 'ವಿದ್ಯೆ' ಎಂದರೇನು? ಅದು ಶಾಲೆ, ವಿಶ್ವವಿದ್ಯಾಲಯ ಮುಂತಾದ ಅಧಿಕೃತ ಸಂಸ್ಥೆಗಳಲ್ಲಿ ಸಿಗತಕ್ಕ ತರಬೇತಿ ಮಾತ್ರವೆ? ಜನಸಾಮಾನ್ಯರು 'ಅವಿದ್ಯಾವಂತ'ರೆ ಅಥವಾ ಅವರಲ್ಲಿ ಕೇವಲ ಪ್ರತಿಷ್ಠಿತರಿಗಿಂತ ವಿಭಿನ್ನ ಶಿಕ್ಷಣ ಹಾಗೂ ಸಂಸ್ಕೃತಿ ಇದೆಯೆ?

ಎಲ್ಲಾ ಜನಸಾಮಾನ್ಯರಿಗೂ ಅದೇ ಅನುಭವಗಳಿರುತ್ತವೆ ಎಂದು ಅಂದುಕೊಳ್ಳಲಿಕ್ಕೂ ಖಂಡಿತವಾಗಿ ಸಾಧ್ಯವಿಲ್ಲ. ಮೂರನೆಯ ಅಧ್ಯಾಯದಲ್ಲಿ ಜೋನ್ ಡಬ್ಲ್ಯು. ಸ್ಕಾಟ್ ಅವರು ಮಹಿಳೆಯರ ಇತಿಹಾಸವನ್ನು ಪುರುಷರ ಇತಿಹಾಸದಿಂದ ಬೇರೆಯಾಗಿ ನೋಡುವ ಮಹತ್ವವನ್ನು ಗುರುತಿಸಿದ್ದಾರೆ. ಇಟಲಿಯಿಂದ ಬ್ರೆಜಿಲ್‌ವರೆಗೆ ಜಗತ್ತಿನ ಕೆಲವು ಭಾಗಗಳಲ್ಲಿ ಜನಸಾಮಾನ್ಯರ ಇತಿಹಾಸವನ್ನು ಹೆಚ್ಚಾಗಿ 'ಪರಾಜಿತರ ಇತಿಹಾಸ' ಎಂಬುದಾಗಿ ಕರೆಯಲಾಗುತ್ತದೆ, ಆ ಮೂಲಕ ಪಶ್ಚಿಮದಲ್ಲಿನ ದಮನಿತ ವರ್ಗದ ಅನುಭವಗಳನ್ನು ವಸಾಹತು ಪ್ರಜೆಗಳ ಇತಿಹಾಸದೊಳಗೆ ಸೇರಿಸಲಾಗುತ್ತದೆ ಆದರೆ ಈ ಅನುಭವಗಳ ನಡುವಿನ ವ್ಯತ್ಯಾಸಗಳನ್ನೂ ಚರ್ಚಿಸುವ ಅಗತ್ಯವಿದೆ.

'ನಿಮ್ನ ಸ್ತರದ ಇತಿಹಾಸ' ಎಂಬ ನುಡಿಗಟ್ಟು ಈ ಕಷ್ಟಗಳಿಂದ ಪಾರಾಗುವ ಮಾರ್ಗವನ್ನು ನೀಡುವಂತೆ ತೋರುತ್ತದೆ, ಆದರೆ ಅದು ತನ್ನದೇ ಸಮಸ್ಯೆಗಳನ್ನು ಸೃಜಿಸುತ್ತದೆ. ಅದು ವಿಭಿನ್ನ ಸಂದರ್ಭಗಳಲ್ಲಿ ತನ್ನ ಅರ್ಥಗಳನ್ನು ಬದಲಿಸುತ್ತದೆ. ನಿಮ್ನ ಸ್ತರದ ರಾಜಕೀಯ ಇತಿಹಾಸವು ಅಧಿಕಾರದಿಂದ ವಂಚಿತರಾದ ಎಲ್ಲರ ಯೋಚನೆಗಳು ಮತ್ತು ಕ್ರಿಯೆಗಳನ್ನು ಕುರಿತು ಚರ್ಚಿಸಬೇಕೆ? ಅಥವಾ ಅದು ಸ್ಥಾನಿಕ ಅಥವಾ 'ಸಾಮಾನ್ಯ ಜನರ' ಹಂತದ ರಾಜಕೀಯವನ್ನು ಕುರಿತಾಗಿರಬೇಕೆ? ಚರ್ಚಿನ ನಿಮ್ನ ಸ್ತರದ ಇತಿಹಾಸವು ಸಾಮಾಜಿಕ ಸ್ಥಾನಮಾನಗಳನ್ನು ಉಪೇಕ್ಷಿಸಿ ಸಾಮಾನ್ಯರ ದೃಷ್ಟಿಕೋನದಿಂದ ಮತಧರ್ಮವನ್ನು ನೋಡಬೇಕೆ? ನಿಮ್ನ ಸ್ತರದ ವೈದ್ಯಕೀಯ ಇತಿಹಾಸವು ವೃತ್ತಿಪರ ವೈದ್ಯರಿಗೆ ಪ್ರತಿಯಾಗಿ ನಾಟಿ ವೈದ್ಯರ ಕುರಿತಾಗಿರಬೇಕೆ ಅಥವಾ ರೋಗಿಗಳ ಅನುಭವ, ರೋಗ ಪರೀಕ್ಷೆ ಮುಂತಾದ ವಿಷಯಗಳ ಕುರಿತಾಗಿರಬೇಕೆ? ಸೈನ್ಯದ ನಿಮ್ನ ಸ್ತರದ ಇತಿಹಾಸವು ಸಾಮಾನ್ಯ ಸೈನಿಕನ ಆಜಿನ್‌ಕೋರ್ಟ್ ಅಥವಾ ವಾಟರ್ಲೂ ಕುರಿತಾಗಿರಬೇಕೆ ಅಥವಾ ಯುದ್ಧದ ಕುರಿತ ನಾಗರಿಕರ ಅನುಭವವನ್ನು ಕೇಂದ್ರೀಕರಿಸಬೇಕೆ? ಶಿಕ್ಷಣದ ನಿಮ್ನ ಸ್ತರದ ಇತಿಹಾಸವು ಮಂತ್ರಿಗಳು ಹಾಗೂ ಸಿದ್ಧಾಂತಿಗಳಿಗೆ ಬದಲಾಗಿ, ಸಾಮಾನ್ಯ ಶಿಕ್ಷಕರನ್ನು ಕೇಂದ್ರೀಕರಿಸಬೇಕೆ ಅಥವಾ ಅದು ವಿದ್ಯಾರ್ಥಿಗಳ ದೃಷ್ಟಿಕೋನದಿಂದ ಶಾಲೆಗಳನ್ನು ಪ್ರಸ್ತುತಪಡಿಸಬೇಕೆ? ನಿಮ್ನ ಸ್ತರದ ಆರ್ಥಿಕ ಇತಿಹಾಸವು ಸಣ್ಣ ವ್ಯಾಪಾರಿಯನ್ನು ಕೇಂದ್ರೀಕರಿಸಬೇಕೊ ಅಥವಾ ಸಣ್ಣ ಗಿರಾಕಿಯನ್ನೊ?

ಹೊಸ ವಿಧಾನದಲ್ಲಿ ವ್ಯಾಖ್ಯೆಯ ಸಮಸ್ಯೆಗಳನ್ನೆದುರಿಸಿದ ಮತ್ತೊಂದು ಉದಾಹರಣೆಯೆಂದರೆ ದೈನಂದಿನ ಇತಿಹಾಸ. ಅದನ್ನು ಜರ್ಮನರು Altagsgeschichte ಎಂಬುದಾಗಿ ಕರೆಯುತ್ತಾರೆ. ಈ ನುಡಿಗಟ್ಟು ಸಂಪೂರ್ಣ ಹೊಸದೇನಲ್ಲ. ಉದಾಹರಣೆಗೆ la vie quotidienne ಎಂಬುದು 1930ರಲ್ಲಿ ಫ್ರೆಂಚ್ ಪ್ರಕಾಶಕರಾದ Hachette ಅವರಿಂದ ಪ್ರಾರಂಭಿಸಲ್ಪಟ್ಟ ಸರಣಿಯ ಶೀರ್ಷಿಕೆ. ಹೊಸತೇನೆಂದರೆ ಸಮಕಾಲೀನ ಇತಿಹಾಸ ಬರವಣಿಗೆಯಲ್ಲಿ, ಅದರಲ್ಲೂ 1967ರಲ್ಲಿ ಬ್ರಾದೆಲ್‌ನ ಸುಪ್ರಸಿದ್ಧ ಅಧ್ಯಯನದ ಪ್ರಕಟಣೆಯ ನಂತರ ದಿನನಿತ್ಯದ ಜೀವನಕ್ಕೆ ನೀಡಲಾದ ಮಹತ್ವ. ಒಂದು ಕಾಲದಲ್ಲಿ ಕ್ಷುಲ್ಲಕವೆಂದು ತಿರಸ್ಕರಿಸಲ್ಪಟ್ಟಂಥದ್ದು ಈಗ ಕೆಲವು ಇತಿಹಾಸಕಾರರಿಗೆ ಏಕಮೇವ 'ನೈಜ' ಇತಿಹಾಸವಾಗಿ ಕಂಡು, ಅದೇ ಕೇಂದ್ರಸ್ಥವಾಗಿ ಉಳಿದೆಲ್ಲವನ್ನೂ ಅದಕ್ಕೆ ಸಂಬಂಧಿಸಬೇಕಿದೆ. ಸಮಾಜಶಾಸ್ತ್ರ ಮತ್ತು ತತ್ತ್ವಶಾಸ್ತ್ರದ ಇತ್ತೀಚಿನ ದೃಷ್ಟಿಕೋನಗಳಲ್ಲಿ (ಮಿಶಲ್ ಡೆ ಸಟ್ಯು ಅವರಿಂದ ಹಿಡಿದು ಅರ್ವಿಂಗ್ ಗಾಫ್ಮನ್‌ವರೆಗೆ) (ಮಾರ್ಕ್ಸ್‌ವಾದ ಇರಬಹುದು ಅಥವಾ  ಇಂದ್ರಿಯಗೋಚರ ಅನುಭವವಾದವಿರಬಹುದು) ದಿನನಿತ್ಯ ಎಂಬುದಕ್ಕೆ ತಿರುವು ಸಿಗುತ್ತಿದೆ.

ಈ ಎಲ್ಲಾ ದೃಷ್ಟಿಕೋನಗಳಿಗೂ ಇರುವ ಸಾಮಾನ್ಯ ಅಂಶವೆಂದರೆ ದಿನನಿತ್ಯದ ಅನುಭವ ಜಗತ್ತಿನ ಕುರಿತು (ಅಮೂರ್ತ ರೂಪದ ಸಮಾಜದ ಬದಲಾಗಿ) ಅವುಗಳಿಗಿರುವ ಆಸಕ್ತಿ. ಇದು ಅವು ತುಳಿದಿರುವ ಹೊಸ ಹಾದಿ. ಒಂದು ಸಮಾಜದಲ್ಲಿ ಸ್ವಾಭಾವಿಕವಾಗಿ ಸ್ವೀಕೃತವಾದ ವರ್ತನೆಗಳು ಹಾಗೂ ಮೌಲ್ಯಗಳು ಮತ್ತೊಂದು ಸಮಾಜದಲ್ಲಿ  ಸ್ವತಃ-ಸಿದ್ಧ ಅಸಂಬದ್ಧವೆಂಬುದಾಗಿ ವರ್ಜಿತವಾಗಿರುತ್ತವೆ ಎಂದು ತೋರಿಸುತ್ತಾ, ದಿನನಿತ್ಯದ ಜೀವನವನ್ನು ಸಮಸ್ಯಾತ್ಮಕವೆಂಬಂತೆ ನೋಡುವ ಪ್ರಯತ್ನ. ಸಾಮಾಜಿಕ ಮಾನವಶಾಸ್ತ್ರಜ್ಞರಂತೆ ಸಾಮಾಜಿಕ ಇತಿಹಾಸಕಾರರು ದೈನಂದಿನ ಜೀವನದ ಅಂತರ್ಗತ ನಿಯಮಗಳನ್ನು ಕಂಡುಹಿಡಿದು (ರಶಿಯಾದ ಸಂಕೇತವಿಜ್ಞಾನಿ, ಜೂರಿ ಲಾಟ್ಮನ್ ಪ್ರಕಾರ ದೈನಂದಿನ 'ಕಾವ್ಯಸೂತ್ರ'ಗಳು) ಒಂದು ಸಂಸ್ಕೃತಿಯಲ್ಲಿ ಒಬ್ಬ ತಂದೆ ಅಥವಾ ಮಗಳು  ಹೇಗಿರಬೇಕು, ರಾಜ ಅಥವಾ ಸನ್ಯಾಸಿ ಹೇಗಿರಬೇಕು ಎಂಬುದನ್ನು ತಮ್ಮ ಓದುಗರಿಗೆ ತೋರಿಸಬೇಕಾಗುತ್ತದೆ. ಇತಿಹಾಸ ಬರವಣಿಗೆಯ ಮೇಲೆ ಸಾಂಸ್ಕೃತಿಕ ಸಾಪೇಕ್ಷತಾವಾದದ ಪ್ರಭಾವವು ಅನಿವಾರ್ಯ ಎಂಬಂತೆ ತೋರುತ್ತದೆ.

ಆದರೆ ಸಮಾಜಶಾಸ್ತ್ರಜ್ಞ ನಾರ್ಬರ್ಟ್ ಎಲಿಯಾಸ್ ತನ್ನ ಮಹತ್ವದ ಪ್ರಬಂಧವೊಂದರಲ್ಲಿ ತೋರಿಸಿದಂತೆ ದಿನನಿತ್ಯ ಎಂಬ ಪರಿಕಲ್ಪನೆಯು ಮೇಲ್ನೋಟಕ್ಕೆ ಅನಿಸುವುದಕ್ಕಿಂತಲೂ ಕಡಿಮೆ ಸ್ಪಷ್ಟ ಹಾಗೂ ಹೆಚ್ಚು ಕ್ಲಿಷ್ಟವಾಗಿದೆ. ಎಲಿಯಾಸ್ ಅವರು ಖಾಸಗಿ ಜೀವನದಿಂದ ಹಿಡಿದು ಸಾಮಾನ್ಯ ಜನರ ಜಗತ್ತಿನವರೆಗೆ ಈ ಶಬ್ದದ ಎಂಟು ಪ್ರಚಲಿತ ಅರ್ಥಗಳನ್ನು ಗುರುತಿಸುತ್ತಾರೆ. ದಿನನಿತ್ಯ ಎಂಬುದು, ಕ್ರಿಯೆಗಳನ್ನು ಒಳಗೊಳ್ಳುತ್ತದೆ ಅಥವಾ ಬ್ರಾದೆಲ್ ಅವನ್ನು ದಿನಚರಿ ಹಾಗೂ ನಾವು ಮಾನಸಿಕ ರೂಢಿಗಳು ಎಂದು ಕರೆಯಬಹುದಾದ ಧೋರಣೆಗಳೆಂದು ವ್ಯಾಖ್ಯಾನಿಸುತ್ತಾರೆ. ದಿನನಿತ್ಯ ಹಾಗೂ ಧಾರ್ಮಿಕ ಕ್ರಿಯೆಗಳ ನಡುವಿನ ಸಂಬಂಧವನ್ನು ಚಿತ್ರಿಸುವುದು ಸುಲಭವಲ್ಲ. ವ್ಯಕ್ತಿಗಳ ಹಾಗೂ ಸಮುದಾಯಗಳ ಜೀವನದಲ್ಲಿನ ವಿಶೇಷ ಸಂದರ್ಭಗಳ ದ್ಯೋತಕವೆನಿಸಿದ ಇವು, ದಿನನಿತ್ಯಕ್ಕೆ ವಿರುದ್ಧವಾಗಿ ಕಾಣುತ್ತವೆ. ಮತ್ತೊಂದೆಡೆ ವಿದೇಶೀ ಪ್ರವಾಸಿಗರು ಆಹಾರ ಕ್ರಮ, ಅಭಿವಂದನೆ(greeting)ಯ ಸ್ವರೂಪ, ಮುಂತಾದ ದಿನನಿತ್ಯದ ಕ್ರಿಯೆಗಳನ್ನು ಪ್ರತಿ ಸಮಾಜದಲ್ಲಿಯೂ ಕಾಣುತ್ತಾರೆ. ಸ್ಥಳೀಯರು ಅವುಗಳನ್ನು ರೂಢಿಗಳೆಂಬಂತೆ ನೋಡಲು ವಿಫಲರಾಗುತ್ತಾರೆ.

ಇಷ್ಟೇ ಕಷ್ಟಸಾಧ್ಯವಾದ ಮತ್ತೊಂದು ಸಂಗತಿಯೆಂದರೆ ದಿನನಿತ್ಯದ ರಚನೆಗಳು ಹಾಗೂ ಬದಲಾವಣೆಗಳ ನಡುವಿನ ಸಂಬಂಧವನ್ನು ವಿಶ್ಲೇಷಣೆಗೊಳಪಡಿಸುವುದು ಹಾಗೂ ಅದನ್ನು ವಿವರಿಸುವುದು. ಆಂತರಿಕವಾಗಿ ದಿನನಿತ್ಯವು ಕಾಲಾತೀತಿವಾಗಿರುವಂತೆ ತೋರುತ್ತದೆ. ವಾಸ್ತವಿಕವಾಗಿ ಇತಿಹಾಸದ ಒಂದು ಭಾಗವೆಂಬುದನ್ನು ನಿದರ್ಶಿಸುವ ಕೆಲಸವು ಸಾಮಾಜಿಕ ಇತಿಹಾಸಕಾರರಿಗೆ ಒಂದು ಸವಾಲು.  ಉದಾಹರಣೆಗೆ  ಸುಧಾರಣೆ ಅಥವಾ ಫ್ರೆಂಚ್ ಕ್ರಾಂತಿಯಂಥ ಮಹಾನ್ ಘಟನೆಗಳ ಜೊತೆಗೆ ಅಥವಾ ದೀರ್ಘಕಾಲೀನ ಪ್ರವೃತ್ತಿಗಳಾದ ಪಾಶ್ಚಾತ್ಯೀಕರಣ ಅಥವಾ ಬಂಡವಾಳಶಾಹಿಯ ಅಭ್ಯುದಯಗಳ ಜೊತೆಗೆ ದಿನನಿತ್ಯದ ಜೀವನವನ್ನು ಸಂಬಂಧಿಸುವುದು. ಸಮಾಜಶಾಸ್ತ್ರಜ್ಞ ಮ್ಯಾಕ್ಸ್ ವೆಬರ್ ಅವರು 'ರುಟಿನೈಝೇಶನ್' ಎಂಬ ಒಂದು ಸುಪ್ರಸಿದ್ಧವಾದ ಪರಿಭಾಷೆಯನ್ನು ಪ್ರಯೋಗಿಸಿದರು. ಅದು ಇಲ್ಲಿ ಉಪಯುಕ್ತವಾಗಬಹುದು: ಸಾಮಾಜಿಕ

ಇತಿಹಾಸಕಾರರು ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಬೇಕಾದ ಒಂದು ವಿಷಯವೆಂದರೆ ಮಹಾನ್ ಘಟನೆಗಳು ಹಾಗೂ ಪ್ರವೃತ್ತಿಗಳು ದಿನನಿತ್ಯ ಜೀವನದ ರಚನೆಗಳ ಜೊತೆಗೆ ಒಡನಾಡುವ ಪ್ರಕ್ರಿಯೆ. ಫ್ರೆಂಚ್ ಅಥವಾ ರಶಿಯನ್ ಕ್ರಾಂತಿಗಳು ವಿಭಿನ್ನ ಸಾಮಾಜಿಕ ಸಮೂಹಗಳ ದೈನಂದಿನ ಜೀವನವನ್ನು ಎಷ್ಟರಮಟ್ಟಿಗೆ, ಯಾವ ವಿಧಾನದಲ್ಲಿ ಹಾಗೂ ಎಷ್ಟು ಕಾಲ ಪ್ರಭಾವಿಸಿದವು, ಹಾಗೂ ಎಷ್ಟರ ಮಟ್ಟಿಗೆ ಹಾಗೂ ಎಷ್ಟು ಯಶಸ್ವಿಯಾಗಿ ಅದಕ್ಕೆ ಪ್ರತಿರೋಧ ವ್ಯಕ್ತವಾಯಿತು?

ಆಕರಗಳ ಸಮಸ್ಯೆ

ಹೊಸ ಇತಿಹಾಸಕಾರರಿಗಿರುವ ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಆಕರಗಳು ಹಾಗೂ ವಿಧಾನಗಳು ಎಂಬುದರಲ್ಲಿ ಸಂದೇಹವಿಲ್ಲ. ಈಗಾಗಲೇ ವ್ಯಕ್ತವಾಗಿರುವಂತೆ ಇತಿಹಾಸಕಾರರು ಹೊಸ ಸಂಶೋಧನಾ ವಸ್ತುಗಳನ್ನು ಆಯ್ಕೆಮಾಡಲು ಗತದ ಕುರಿತ ಹೊಸ ರೀತಿಯ ಪ್ರಶ್ನೆಗಳನ್ನು ಕೇಳತೊಡಗಿದಾಗ ಅವರು ಅಧಿಕೃತ ದಾಖಲೆಗಳಿಗೆ ಪೂರಕವಾಗಿ ಹೊಸ ರೀತಿಯ ಆಕರಗಳಿಗಾಗಿ ತಡಕಾಡಬೇಕಾಯಿತು. 6ನೆಯ ಅಧ್ಯಾಯದಲ್ಲಿ ಚರ್ಚಿಸಿದಂತೆ ಕೆಲವರು ಮೌಖಿಕ ಇತಿಹಾಸದ ಕಡೆಗೆ ಗಮನಹರಿಸಿತದರು. 8ನೆಯ ಅಧ್ಯಾಯದಲ್ಲಿ ತಿಳಿಸಿದಂತೆ ಕೆಲವರು ಚಿತ್ರಗಳತ್ತ ಗಮನವಿತ್ತರು. ಮತ್ತೂ ಕೆಲವರು ಅಂಕಿಅಂಶಗಳ ಮೊರೆಹೊಕ್ಕರು. ಕೆಲವು ಪ್ರಕಾರದ ಅಧಿಕೃತ ದಾಖಲೆಗಳನ್ನು ಹೊಸರೀತಿಯಲ್ಲಿ ಮರು ಓದಿಗೆ ಒಳಪಡಿಸುವ ಸಾಧ್ಯತೆ ಇದೆಯೆಂಬುದೂ ಪ್ರಮಾಣಿತವಾಗಿದೆ. ಉದಾಹರಣೆಗೆ ಲೋಕಪ್ರಿಯ ಸಂಸ್ಕೃತಿಯ ಇತಿಹಾಸಕಾರರು ನ್ಯಾಯಾಲಯದ ದಾಖಲೆಗಳನ್ನು, ಅದರಲ್ಲೂ ಮುಖ್ಯವಾಗಿ ಆರೋಪಿತರ ವಿಚಾರಣೆಗಳ ದಾಖಲೆಗಳನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗ ಮಾಡಿಕೊಂಡಿದ್ದಾರೆ. ನಿಮ್ನ ಸ್ತರದ ಇತಿಹಾಸದ ಎರಡು ಅತ್ಯಂತ ಸುಪ್ರಸಿದ್ಧ ಅಧ್ಯಯನಗಳು ಚರ್ಚುಗಳ ಇನ್‌ಕ್ವಿಸಿಶನ್ ದಾಖಲೆಗಳನ್ನಾಧರಿಸಿವೆ. ಆ ಕೃತಿಗಳೆಂದರೆ 2ನೆಯ ಅಧ್ಯಾಯದಲ್ಲಿ ಚರ್ಚಿಸಿದ Le Roy Ladurie ಅವರ Montaillou (1975) ಹಾಗೂ  Ginzburg ಅವರ ದಿ ಚೀಸ್ ಎಂಡ್ ದಿ ವರ್ಮ್ಸ್(1976).

ಆದರೆ ಈ ಎಲ್ಲ ದಾಖಲೆಗಳು ಅತ್ಯಂತ ವಿಲಕ್ಷಣ ಸಮಸ್ಯೆಗಳನ್ನು ಎತ್ತಿವೆ. ಉದಾಹರಣೆಗೆ ಲೋಕಪ್ರಿಯ ಸಂಸ್ಕೃತಿಯ ಇತಿಹಾಸಕಾರರು ಅಪರಾಧಿಗಳ ಜೀವನದ, ವಿಚಾರಣೆ ಹಾಗೂ ಮೊಕದ್ದಮೆಗಳಲ್ಲಿನ ಅಸಾಧಾರಣ ಘಟನೆಗಳ ದಾಖಲೆಗಳನ್ನು ಆಧರಿಸಿ, ದೈನಂದಿನ ಸಾಮಾನ್ಯ ಕಲ್ಪನೆಗಳನ್ನು ಪುನರ್‌ರೂಪಿಸಲು ಪ್ರಯತ್ನಿಸಿದ್ದಾರೆ. ಅಪರಾಧಿಗಳು (ಬಹುಶಃ ಈ ಅಪರಾಧಿಗಳು ಅಂತಹ ವರ್ಗದವರಲ್ಲದಿರಬಹುದು) ತಾವು ಒಳಪಟ್ಟ ಅಸಾಮಾನ್ಯ (ಭಯಾನಕವಲ್ಲದ) ಪರಿಸ್ಥಿತಿಯಲ್ಲಿ ಏನನ್ನು ಹೇಳಲು ತಯಾರಿರುತ್ತಾರೋ ಅದನ್ನು ಆಧರಿಸಿ ಸಾಮಾನ್ಯ ಜನರ ಆಲೋಚನೆಯನ್ನು ಅವರು ಪುನರ್‌ರೂಪಿಸಲು ಪ್ರಯತ್ನಿಸಿದ್ದಾರೆ. ಹಾಗಾಗಿ ಅಂಥ ದಾಖಲೆಗಳಲ್ಲಿ ಹೇಳದಿರುವುದನ್ನು ಗ್ರಹಿಸಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಇತಿಹಾಸಕಾರರು Ginzburg ಅಥವಾ Le Roy Ladurieಯವರ ಸೂಕ್ಷ್ಮ ವಿವೇಚನೆಯೊಂದಿಗೆ ಪ್ರಯತ್ನಿಸಿದಾಗ, ಹಾಗೆ ಮಾಡುವುದರಲ್ಲಿ ತಪ್ಪಿಲ್ಲವೆನಿಸುತ್ತದೆ.

ಅದೇ ರೀತಿಯಲ್ಲಿ ಅಂಥ ಓದುವಿಕೆಗೆ ಆಧಾರವಾಗಬಲ್ಲ ಸಿದ್ಧಾಂತಗಳು ಯಾವಾಗಲೂ ಸ್ಪಷ್ಟವಿರುವುದಿಲ್ಲ. ಸಾಮಾಜಿಕವಾಗಿ ಅದೃಶ್ಯವೆನಿಸಿರುವವರ (ಉದಾಹರಣೆಗೆ ಉದ್ಯೋಗಸ್ಥ ಹೆಂಗಸರು) ಚಿತ್ರಣ ಅಥವಾ ಮೃತರ ಅವ್ಯಕ್ತ ಸ್ಪಷ್ಟ ಮೌನ ಬಹುಮತದ (ಆದಾಗ್ಯೂ,ಸಮಗ್ರ ಇತಿಹಾಸದ ಭಾಗವಾಗಿ ಅತ್ಯವಶ್ಯವೆನಿಸಿದವರು) ಆಲಿಸುವಿಕೆಯು ಪಾರಂಪರಿಕ ಇತಿಹಾಸಕ್ಕೆ ಹೋಲಿಸಿದಾಗ ಹೆಚ್ಚಿನ ತೊಂದರೆಯುಳ್ಳ ಕಠಿಣ ಕಾರ್ಯವೆಂಬುದನ್ನು ಒಪ್ಪುವುದು ಸೂಕ್ತ. ಉದಾಹರಣೆಗೆ ಶಾರ್ಲಮೇನ್ ಕಾಲದ ರಾಜಕೀಯ ಇತಿಹಾಸವು ಕನಿಷ್ಠಪಕ್ಷ 16ನೆಯ ಶತಮಾನದ ಅವಿಶ್ವಸನೀಯ ಲೋಕಪ್ರಿಯ ಸಂಸ್ಕೃತಿಯ ಇತಿಹಾಸದಷ್ಟೇ ವಿರಳ ಮತ್ತು ಅವಿಶ್ವಾಸಾರ್ಹ ಆಕರಗಳನ್ನು ಆಧರಿಸಿದೆ.

ಮೌಖಿಕ ಆಧಾರಗಳಿಗೆ ಸಾಕಷ್ಟು ಗಮನವನ್ನು ನೀಡಲಾಗಿದೆ. ಉದಾಹರಣೆಗೆ Jan Vansina ಅವರಂತಹ ಆಫ್ರಿಕಾದ ಇತಿಹಾಸಕಾರರು, ಶತಮಾನಗಳ ಹಿಂದಿನ ಮೌಖಿಕ ಆಧಾರಗಳ ವಿಶ್ವಾಸಾರ್ಹತೆಯ ಕುರಿತು ಕಾಳಜಿವಹಿಸಿದ್ದಾರೆ. ಪಾಲ್ ಥಾಮ್ಸನ್ ಅವರಂತಹ ಸಮಕಾಲೀನ ಇತಿಹಾಸಕಾರರು ಎಡ್ವರ್ಡ್ ಕಾಲದ ಜೀವನಾನುಭವಗಳನ್ನು ಪುನರ್‌ರೂಪಿಸಲು

ಪ್ರಯತ್ನಿಸಿದ್ದಾರೆ. ಇತಿಹಾಸಕಾರ-ಸಂದರ್ಶಕನ ಪ್ರಭಾವಗಳು, ಹಾಗೂ ಸಂದರ್ಶನ ನಡೆಸಿದ ಸಂದರ್ಭವು ಸಂಗತಿಯನ್ನು ತಿಳಿಸುವ ಸಾಕ್ಷ್ಯದ ಮೇಲೆ ಬೀರುವ ಪ್ರಭಾವದ ಕುರಿತು ಚರ್ಚೆಗಳು ನಡೆದಿವೆ. ಅಷ್ಟಾಗಿಯೂ ಕೂಡ ಮೌಖಿಕ ಸಾಕ್ಷ್ಯಗಳ ವಿವೇಚನೆಯು ಶತಮಾನಗಳಿಂದಲೂ ಇತಿಹಾಸಕಾರರು ಅಭ್ಯಸಿಸುತ್ತಿರುವ ದಾಖಲೆಗಳ ವಿವೇಚನೆಯ ಉತ್ಕೃಷ್ಟತೆಯ ಮಟ್ಟವನ್ನು ಇನ್ನೂ ತಲುಪಿಲ್ಲವೆಂಬುದನ್ನು ಒಪ್ಪತಕ್ಕದ್ದು. ಕಾಲು ಶತಮಾನದಲ್ಲಿ ಕ್ರಮಿಸಿದ ದೂರ ಮತ್ತು ಇನ್ನೂ ಕ್ರಮಿಸಬೇಕಾದ ದೂರದ ಬಗ್ಗೆ ಕಲ್ಪನೆ ಮೂಡಬೇಕಾದರೆ ಮೌಖಿಕ ಪರಂಪರೆಯ ಕುರಿತು 1961ರಲ್ಲಿ ಪ್ರಕಟಗೊಂಡ ವ್ಯಾನ್‌ಸಿನಾ ಅವರ ಅಧ್ಯಯನದ ಪ್ರಥಮ ಆವೃತ್ತಿಯನ್ನು 1985ರಲ್ಲಿ ಸಂಪೂರ್ಣವಾಗಿ ಪುನರ್‌ಲಿಖಿತಗೊಂಡ ಆವೃತ್ತಿಯೊಂದಿಗೆ ಹೋಲಿಸಬೇಕು.

ಛಾಯಾಚಿತ್ರಗಳು, ಚಿತ್ರಗಳು ಹಾಗೂ ಸಾಮಾನ್ಯವಾಗಿ ಭೌತಿಕ ಸಂಸ್ಕೃತಿಯ ಪುರಾವೆಗಳ ಪರಿಸ್ಥಿತಿ ಇದೇ ರೀತಿಯಿದೆ. ಕ್ಯಾಮೆರಾ, ವಾಸ್ತವವನ್ನು ವಸ್ತುನಿಷ್ಠವಾಗಿ ಸೆರೆಹಿಡಿಯುತ್ತದೆ ಎಂಬ ಗ್ರಹಿಕೆಯನ್ನು ಇತ್ತೀಚೆಗೆ ಛಾಯಾಚಿತ್ರದ (ಚಲನಚಿತ್ರಗಳನ್ನೂ ಒಳಗೊಂಡಂತೆ) ಕುರಿತು ನಡೆದ ಅಧ್ಯಯನವು ತಪ್ಪೆಂಬುದಾಗಿ ತೋರಿಸಿದೆ. ತಮ್ಮ ಆಸಕ್ತಿಗಳು, ವಿಶ್ವಾಸಗಳು, ಮೌಲ್ಯಗಳು, ನಂಬಿಕೆಗಳು ಹಾಗೂ ಪೂರ್ವಗ್ರಹ ಮುಂತಾದವುಗಳಿಗನುಗುಣವಾಗಿ ವಸ್ತುವಿನ ಆಯ್ಕೆ ಹಾಗೂ ಚಿತ್ರಾತ್ಮಕ ಪರಂಪರೆಗಳ ನಿಟ್ಟಿನ ಛಾಯಾಚಿತ್ರಕಾರರ ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕ ಋಣಕ್ಕೆ ಅಧ್ಯಯನವು ಒತ್ತು ನೀಡಿದೆ. ಗ್ರಾಮೀಣ ಜೀವನದ ಕೆಲವು ವಿಕ್ಟೋರಿಯನ್ ಛಾಯಾಚಿತ್ರಗಳು 17ನೆಯ ಶತಮಾನದ ಡಚ್ ಭೂಮೇಲ್ಮೈ ವರ್ಣಚಿತ್ರಗಳನ್ನು ಹೋಲುವುದು ಏಕೆಂದರೆ ಆ ಛಾಯಾಚಿತ್ರಕಾರರು ವರ್ಣಚಿತ್ರಗಳನ್ನು ಬಲ್ಲವರಾಗಿದ್ದರು ಮತ್ತು ಥಾಮಸ್ ಹಾರ್ಡಿ ಎಂಬ ಕಾದಂಬರಿಕಾರ ತನ್ನ ಅಂಡರ್ ದಿ ಗ್ರೀನ್‌ವುಡ್ ಟ್ರೀ ಕಾದಂಬರಿಯ ಉಪಶೀರ್ಷಿಕೆಯಲ್ಲಿ, 'ಡಚ್ ಪರಂಪರೆಯ ಒಂದು ವರ್ಣಚಿತ್ರ'ವೆಂದು ಬರೆದಿರುವಂತೆ, ತಮ್ಮ ಆಕೃತಿಗಳನ್ನು ಆ ಪ್ರಕಾರವಾಗಿ ಪ್ರಸ್ತುತಪಡಿಸಿದರು. ಇತಿಹಾಸಕಾರರ ತರಹ ಛಾಯಾಚಿತ್ರಕಾರರು ವಾಸ್ತವಿಕತೆಯ ಪ್ರತಿನಿಧಿತ್ವಗಳನ್ನು ಪ್ರಸ್ತುತಪಡಿಸುತ್ತಾರೆ, ಪ್ರತಿಬಿಂಬಗಳನ್ನಲ್ಲ. ಛಾಯಾಗ್ರಹಣದ ಚಿತ್ರಗಳ ಮೂಲದ ಕುರಿತು ವಿಮರ್ಶೆ ನಡೆಸುವಲ್ಲಿ ಕೆಲವು ಮಹತ್ವದ ಹೆಜ್ಜೆಗಳನ್ನು ಇಡಲಾಗಿದೆ. ಆದರೆ ಅಲ್ಲೂ ಕೂಡ ಇನ್ನೂ ಬಹು ದೂರ ಕ್ರಮಿಸಬೇಕಾಗಿದೆ.

8ನೆಯ ಅಧ್ಯಾಯದಲ್ಲಿ ಐವನ್ ಗ್ಯಾಸ್ಕಲ್ ಎಂಬುವವರಿಂದ ಚಿತ್ರಾತ್ಮಕ ಆಕೃತಿಗಳಿಗೆ ಸಂಬಂಧಿಸಿದಂತೆ, ಇರ್ವಿನ್ ಪೈನೋಫ್ಸ್ಕಿ ಹಾಗೂ ಎಡ್ಗರ್ ವಿಂಡ್ ಅವರಂತಹ ಕಲೆಯ ಇತಿಹಾಸಕಾರರ ಕಾಲದಲ್ಲಿ ಅವರ ಪ್ರತಿಮಾ ವಿವರ ಅಥವಾ ಪ್ರತಿಮಾ ಶಾಸ್ತ್ರವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನ ಉತ್ಸಾಹದ ವಾತಾವರಣದ ನಂತರ ಸಾಪೇಕ್ಷಿಕ ಸಂಶಯವಾದದ ಹಿಮ ಯುಗವು ಕಾಣಿಸಿಕೊಂಡಿದೆ. ನಿರ್ದಿಷ್ಟವಾಗಿ ಅವ್ಯಕ್ತ ಅರ್ಥಗಳಿಗೆ ಸಂಬಂಧಿಸಿದಂತೆ ವ್ಯಾಖ್ಯೆಯ ಮಾನದಂಡಗಳನ್ನು ರೂಪಿಸುವುದು ವಾಸ್ತವವಾಗಿ ಕಷ್ಟಕರವಾದ ಕೆಲಸ. ಬೇರೆ ವಿಷಯಗಳ ಇತಿಹಾಸಕಾರರು ತಮ್ಮದೇ ಉದ್ದೇಶಗಳನ್ನಿಟ್ಟುಕೊಂಡು ಧಾರ್ಮಿಕ ಹಾಗೂ ರಾಜಕೀಯ ಧೋರಣೆಗಳಿಗೆ ಸಾಕ್ಷಿಯಾಗಿ ಚಿತ್ರಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದಾಗ ಪ್ರತಿಮಾ ವಿವರಗಳ ಸಮಸ್ಯೆಯು ಮತ್ತೂ ಇಕ್ಕಟ್ಟಿಗೆ ಸಿಲುಕುತ್ತದೆ. ಪರಿಧಿಯೊಂದರಲ್ಲಿ ತರ್ಕವನ್ನು ಮಂಡಿಸುವುದು ಅತ್ಯಂತ ಸುಲಭ. ಉದಾಹರಣೆಗೆ, ಆಲ್‌ಬ್ರೆಕ್ಟ್ ಡ್ಯೂರರ್ ರಚಿಸಿದ ಒಂದು ಚಿತ್ರವನ್ನು ಆಧ್ಯಾತ್ಮಿಕ ಬಿಕ್ಕಟ್ಟಿನ ಲಕ್ಷಣವೆಂಬಂತೆ ಭಾವಿಸಿಕೊಂಡು ನಂತರ  ಚಿತ್ರವನ್ನು ಬಿಕ್ಕಟ್ಟಿನ ಅಸ್ತಿತ್ವದ ತರ್ಕದ ರೂಪದಲ್ಲಿ ಪ್ರಸ್ತುತಪಡಿಸುವುದು.

ಭೌತಿಕ ಸಂಸ್ಕೃತಿಯು ಪ್ರಾಕ್ತನ ಶಾಸ್ತ್ರಜ್ಞರ ಪಾರಂಪರಿಕ ಕ್ಷೇತ್ರ ಎಂಬುದು ಖಂಡಿತ. ಲಿಖಿತ ಆಧಾರಗಳೇ ಇಲ್ಲದ ಯುಗಗಳ ಕುರಿತು ಅವರು ಅಧ್ಯಯನ ನಡೆಸುತ್ತಾರೆ. ಆದರೆ ಪ್ರಾಕ್ತನಶಾಸ್ತ್ರದ ವಿಧಾನಗಳನ್ನು ಕೇವಲ 'ಪ್ರಾಗೈತಿಹಾಸ'ಕ್ಕೆ ಸೀಮಿತಗೊಳಿಸಬೇಕೆಂದೇನೂ ಇಲ್ಲ. ನಿಜವಾಗಿ ಹೇಳಬೇಕೆಂದರೆ ಪ್ರಾಕ್ತನಶಾಸ್ತ್ರಜ್ಞರು ಮಧ್ಯಯುಗ, ಪ್ರಾರಂಭಿಕ ಕೈಗಾರಿಕಾ ಕ್ರಾಂತಿ ಹಾಗೂ ತೀರ ಇತ್ತೀಚೆಗೆ ವಸಾಹತುಶಾಹಿ ಅಮೇರಿಕಾದಿಂದ ಹಿಡಿದು ಇಂದಿನ ಗ್ರಾಹಕ ಸಮಾಜಗಳವರೆಗೆ ವಿಸ್ತೃತ ವ್ಯಾಪ್ತಿಯ ಕಾಲಗಳನ್ನು ಅಭ್ಯಸಿಸುತ್ತಿದ್ದಾರೆ.

ಇತಿಹಾಸಕಾರರು ಪ್ರಾಕ್ತನಶಾಸ್ತ್ರಜ್ಞರನ್ನು ಅನುಸರಿಸತೊಡಗಿದ್ದಾರೆ. ಗತದ ಉತ್ಖನನಗಳನ್ನು ಮಾಡಿಲ್ಲವಾದರೂ (ಆಧುನಿಕ ಯುಗದ ಪ್ರಾರಂಭ ಕಾಲದ ವರ್ಸೇಲ್ಸ್ ಮತ್ತು ಇತರ ಪ್ರಮುಖ ಸ್ಮಾರಕಗಳನ್ನು ಉತ್ಖನನ ಮಾಡುವ ಅಗತ್ಯವಿಲ್ಲ ಎಂಬುದು ಸಮಾಧಾನದ ವಿಚಾರ) ಕನಿಷ್ಠಪಕ್ಷ ಭೌತಿಕ ವಸ್ತುಗಳಿಗೆ ಹೆಚ್ಚಿನ ಲಕ್ಷ್ಯವನ್ನು ಕೊಡತೊಡಗಿದ್ದಾರೆ. ಆಧುನಿಕ ಯುಗದ ಪ್ರಾರಂಭದಲ್ಲಿ ವ್ಯಕ್ತಿವಾದ ಹಾಗೂ ಏಕಾಂತತೆಯ ಉಗಮವನ್ನು ಕುರಿತ ತರ್ಕಗಳು ಇಂದು ಕೇವಲ ದಿನಚರಿಗಳ ಸಾಕ್ಷಿಯನ್ನು ಮಾತ್ರ ಆದರಿಸಿಲ್ಲ, ಅದರ ಜೊತೆಗೆ ಸಾಮೂಹಿಕ ಬಟ್ಟಲುಗಳ ಬದಲು ವ್ಯಕ್ತಿಗತ ಲೋಟಗಳು ಮತ್ತು ಕುರ್ಚಿಗಳು (ಸಾಮೂಹಿಕ ಬೆಂಚ್‌ಗಳ ಬದಲು), ಹಾಗೂ ವಿಶಿಷ್ಟ ಮಲಗುವ ಕೋಣೆಗಳ ಸಾಕ್ಷಿಗಳನ್ನೂ ಆಧರಿಸಿವೆ.

ಆದರೆ, ಇಂಥ ಉದಾಹರಣೆಗಳಲ್ಲಿ ಸಾಹಿತ್ಯಿಕ ಪುರಾವೆಯ ನಿಟ್ಟಿನಲ್ಲಿ ಕಂಡುಕೊಂಡ ಊಹಾಸಿದ್ಧಾಂತವನ್ನು ಧೃಡೀಕರಿಸುವುದನ್ನು ಬಿಟ್ಟು ಭೌತಿಕ ಸಂಸ್ಕೃತಿಯನ್ನು ಬೇರಾವುದಕ್ಕಾದರೂ ಉಪಯೋಗಿಸಬಹುದೇ ಎಂಬ ಕೌತುಕ ಹುಟ್ಟದೇ ಇರದು. ಕಡೇ ಪಕ್ಷ ಪಾಶ್ಚಾತ್ಯ ದೇಶಗಳಲ್ಲಾದರೂ 1500ರ ನಂತರದ ಕಾಲದ ಕುರಿತು ಪ್ರಾಕ್ತನ ಶಾಸ್ತ್ರವು ಅದಕ್ಕಿಂತಲೂ ಹೆಚ್ಚಿನದರ ಕುರಿತು ಆಶಿಸಬಹುದೆ? ದಿವಂಗತ ಸರ್ ಮೋಸೆಸ್ ಫಿನ್ಲೆಯವರು 'ಕೆಲವು ರೀತಿಯ ದಾಖಲೀಕರಣಗಳು ಪ್ರಾಕ್ತನ ಶಾಸ್ತ್ರವನ್ನು ಹೆಚ್ಚು ಕಡಿಮೆ ಅನಗತ್ಯವಾಗಿಸುತ್ತವೆ' ಎಂದು ಒಂದೇ ಮಾತಿನಲ್ಲಿ ಕೈಗಾರಿಕಾ ಪ್ರಾಕ್ತನಶಾಸ್ತ್ರವನ್ನು ಕಸದ ಬುಟ್ಟಿಗೆ ಎಸೆದಿದ್ದರು. ಅವರ ಸವಾಲಿಗೆ ಗಂಭೀರ ಉತ್ತರವನ್ನು ನೀಡಬೇಕಾಗಿದೆ. ಮಧ್ಯಕಾಲದ ನಂತರದ ಇತಿಹಾಸದ ಭೌತಿಕ ಸಂಸ್ಕೃತಿಯ ಪುರಾವೆಗಳ ಮಹತ್ವವನ್ನು ಸಮಗ್ರವಾಗಿ ನಿಷ್ಕರ್ಷೆಗೆ ಒಡ್ಡಬೇಕಾಗಿದೆ.

ಕಳೆದ ಕೆಲವು ವರ್ಷಗಳಿಂದ ಭೌತಿಕ ಸಂಸ್ಕೃತಿಯ ಇತಿಹಾಸವು ಸಾಕಷ್ಟು ಕುತೂಹಲವನ್ನು ಕೆರಳಿಸಿರುವ ಕ್ಷೇತ್ರವಾಗಿದೆ. ವಿಪರ್ಯಾಸವೆಂದರೆ, ಅದು ಕಲಾಕೃತಿಗಳನ್ನು ಅಷ್ಟಾಗಿ ಆಧರಿಸದೆ, ಸಾಹಿತ್ಯಾಧಾರಗಳನ್ನೇ ಹೆಚ್ಚಾಗಿ ಆಧರಿಸಿದೆ. 'ವಸ್ತುಗಳ ಸಾಮಾಜಿಕ ಜೀವನ' ಅಥವಾ ಸರಕುಗಳ ಜಗತ್ತು' ಅಥವಾ ನಿರ್ದಿಷ್ಟವಾಗಿ, ಸರಕುಗಳ ಅವರ ಬಳಕೆಯಿಂದ ವ್ಯಕ್ತವಾಗುವ ಸಮೂಹಗಳ ಸಾಮಾಜಿಕ ಜೀವನದ ಬಗ್ಗೆ ಇತಿಹಾಸಕಾರರು ಕಾಳಜಿವಹಿಸುತ್ತಾರೆ. ಅಂಥವರು ಪ್ರವಾಸಿಗಳ ವಿವರಣೆಗಳು (ನಮಗೆ ನಿರ್ದಿಷ್ಟ ವಸ್ತುಗಳ ಸ್ಥಳ ಮತ್ತು ಕಾರ್ಯದ ಕುರಿತು ಹೆಚ್ಚಿನದನ್ನು ತಿಳಿಸುವ) ಅಥವಾ ಆಸ್ತಿ ವಿವರದ ಪಟ್ಟಿಗಳ ಪುರಾವೆಗಳನ್ನು (ಅವುಗಳನ್ನು ಸಂಖ್ಯಾತ್ಮಕ ವಿಶ್ಲೇಷಣೆಗೆ ಅಳವಡಿಸಬಹುದು) ತೀರಾ ಅತಿಯಾಗಿ ಅವಲಂಬಿಸಿರುತ್ತಾರೆ.

ಕಳೆದ ತಲೆಮಾರಿನಲ್ಲಿ ವಿಧಾನವನ್ನು ಕುರಿತ ಅತ್ಯಂತ ಮುಖ್ಯವಾದ ಹಾಗೂ ಅತ್ಯಂತ ವಿವಾದಾಸ್ಪದವಾದ ಆವಿಷ್ಕಾರವೆಂದರೆ ಸಂಖ್ಯಾಶಾಸ್ತ್ರೀಯ ವಿಧಾನಗಳ ಉಗಮ ಮತ್ತು ಪ್ರಸಾರ. ಸಂಖ್ಯಾಶಾಸ್ತ್ರೀಯ ಅಧ್ಯಯನವನ್ನು ಕೆಲವೊಮ್ಮೆ ವ್ಯಂಗ್ಯವಾಗಿ, ಕ್ಲಿಯೊಮೆಟ್ರಿಕ್ಸ್ ಎನ್ನಲಾಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಇತಿಹಾಸದ ಪ್ರೇರಣೆಯ ಮಹತ್ವಪೂರ್ಣ ಅಂಕಿಅಂಶಗಳು. ಈ ವಿಧಾನವು ಖಂಡಿತವಾಗಿಯೂ ಆರ್ಥಿಕ ಇತಿಹಾಸಕಾರರು ಹಾಗೂ ಚರಿತ್ರೆಕಾಲದ ಜನಸಂಖ್ಯಾಶಾಸ್ತ್ರಜ್ಞರಲ್ಲಿ ಹಿಂದಿನಿಂದಲೂ ಇದೆ ಎನ್ನಿ. ಯಾವುದು ಹೊಸದು ಅಥವಾ ಆಗಿತ್ತು ಅಂದರೆ, 1960 ಮತ್ತು 70ರ ದಶಕದಲ್ಲಿ ಇತರ ಪ್ರಕಾರದ ಇತಿಹಾಸಗಳಿಗೆ ಅದರ ಪ್ರಸರಣ. ಉದಾಹರಣೆಗೆ ಅಮೆರಿಕ ಸಂಯುಕ್ತ ರಾಜ್ಯದಲ್ಲಿ 'ಹೊಸ ರಾಜಕೀಯ ಇತಿಹಾಸ' ಎಂಬುದಿದೆ. ಅದನ್ನು ಅನುಸರಿಸುವವರು ಚುನಾವಣೆಗಳಲ್ಲಿ ಅಥವಾ ಪಾರ್ಲಿಮೆಂಟುಗಳಲ್ಲಿ ಚಲಾವಣೆಯಾದ ಮತಗಳನ್ನು ಲೆಕ್ಕಹಾಕುತ್ತಾರೆ. ಫ್ರಾನ್ಸಿನಲ್ಲಿ 'ಸರಣಿ ಇತಿಹಾಸ' ಎಂಬುದಿದೆ. ಅಂದರೆ ದತ್ತಾಂಶಗಳನ್ನು ಕಾಲಾನುಕ್ರಮದಲ್ಲಿ ಸರಣಿಬದ್ಧವಾಗಿ ವ್ಯವಸ್ಥೆಗೊಳಿಸಲಾಗುತ್ತದೆ. ಅದು ಕ್ರಮೇಣವಾಗಿ ಬೆಲೆಗಳ ಅಧ್ಯಯನದಿಂದ (1930ರ ದಶಕದಲ್ಲಿ) ಜನಸಂಖ್ಯೆಯ ಅಧ್ಯಯನದವರೆಗೂ (1950ರ ದಶಕದಲ್ಲಿ), ಧಾರ್ಮಿಕ ಅಥವಾ ಧರ್ಮನಿರಪೇಕ್ಷ ಮನೋಭಾವನೆಗಳ ಇತಿಹಾಸದ 'ಮೂರನೆಯ ಹಂತ'ದವರೆಗೂ ವಿಸ್ತರಿಸಿದೆ. ಆಧುನಿಕ ಫ್ರಾನ್ಸಿನಲ್ಲಿ 'ಕ್ರಿಶ್ಚಿಯಾನಿಟಿಯಿಂದ ಮುಕ್ತಗೊಳಿಸುವಿಕೆ'(ಡಿಕ್ರಿಶ್ಚಿಯನೈಸೇಶನ್)ಯ ಕುರಿತ ಒಂದು ಸುಪ್ರಸಿದ್ಧ ಅಧ್ಯಯನವು ತನ್ನ ಪುರಾವೆಯ ಅಧಿಕಾಂಶವನ್ನು ಈಸ್ಟರ್ ಸಮಾರಂಭಗಳಲ್ಲಿನ ಕ್ಷೀಣಿಸುತ್ತಿರುವ ಸಂಖ್ಯೆಯಿಂದ ಪಡೆಯಿತು. ಮತ್ತೊಂದು ಅಧ್ಯಯನವು ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸಿನ ಆಗ್ನೇಯ ಭಾಗದ ಐತಿಹಾಸಿಕ ಪ್ರದೇಶ ಮತ್ತು ಹಿಂದಿನ ಪ್ರಾಂತ್ಯವೊಂದರತ್ತ ಗಮನವನ್ನು

ಕೇಂದ್ರೀಕರಿಸುತ್ತದೆ. ಅಲ್ಲಿನ ಸುಮಾರು 30000 ಮರಣ ಪತ್ರಗಳ ಪ್ರವೃತ್ತಿಗಳಲ್ಲಿ ವ್ಯಕ್ತಗೊಂಡ ಬದಲಾವಣೆಗಳನ್ನು ಆಧರಿಸಿ ಆ ಪ್ರದೇಶದಲ್ಲಿ ಸಾವಿನ ಕುರಿತು ಬದಲಾಗುತ್ತಿದ್ದ ಧೋರಣೆಯನ್ನು ಸಂಶೋಧಿಸುತ್ತದೆ. ಅಂಥ ಮರಣಪತ್ರಗಳಲ್ಲಿ 'ಸ್ವರ್ಗದ ನ್ಯಾಯಾಲಯ'ದ ಕುರಿತು, ಅಥವಾ ವಿಸ್ತೃತ ಅಂತಿಮ ಸಂಸ್ಕಾರಕ್ಕಾಗಿ ಉಯಿಲಿನ ಮೂಲಕ ಆಸ್ತಿಯನ್ನು ನೀಡುವ, ಅಥವಾ ಸತ್ತವರಿಗಾಗಿ ನಡೆಸುವ ಸಾಮೂಹಿಕ ಪ್ರಾರ್ಥನೆಗಳ ಕುರಿತು ಉಲ್ಲೇಖಗಳು ವಿರಳವಾಗುತ್ತ ಹೋಗುವುದನ್ನು ಗುರುತಿಸಲಾಗಿದೆ.

ಕಂಪ್ಯೂಟರ್‌ಗಳ ಸಹಾಯದಿಂದ ಸಂಖ್ಯಾಶಾಸ್ತ್ರವು (ಅಂಕಿಅಂಶಗಳು) ರಾಂಕಿಯನ್ ಇತಿಹಾಸದ ಭದ್ರಕೋಟೆಯಾದ ಸಾರ್ವಜನಿಕ ಪತ್ರಾಗಾರಗಳನ್ನೂ ಆಕ್ರಮಿಸಿದೆ. ಉದಾಹರಣೆಗೆ ಅಮೇರಿಕನ್ ನ್ಯಾಶನಲ್ ಆರ್ಕಿವ್ಸ್ ಈಗ 'ಯಂತ್ರಗಳು ಓದಬಲ್ಲ ದತ್ತಾಂಶದ ವಿಭಾಗ'ವನ್ನು ಹೊಂದಿದೆ. ಪತ್ರಾಗಾರ ತಜ್ಞರು ಇಂದು ಧ್ವನಿಮುದ್ರಿತ ಟೇಪುಗಳು ಹಾಗೂ ಹಸ್ತಪ್ರತಿಗಳನ್ನು ಸಂರಕ್ಷಿಸುವ ಹಾಗೂ ದಾಸ್ತಾನುಮಾಡುವ ಕುರಿತು ಚಿಂತಿಸಲಾರಂಭಿಸಿದ್ದಾರೆ. ಇದರ ಪರಿಣಾಮದಿಂದಾಗಿ ಇತಿಹಾಸಕಾರರು ನ್ಯಾಯಾಂಗ ವಿಚಾರಣೆಗಳ ಸಾರ್ವಜನಿಕ ಪತ್ರಾಗಾರಗಳಂತಹ ಹಿಂದಿನ ಸಾರ್ವಜನಿಕ ಪತ್ರಾಗಾರಗಳನ್ನು ಪರಿಮಾಣಾತ್ಮಕ ವಿಧಾನದಲ್ಲಿ ನಿರ್ವಹಿಸಬಹುದಾದ ದತ್ತಾಂಶ ಸಂಗ್ರಹ(ಬ್ಯಾಂಕ್)ಗಳ ರೂಪದಲ್ಲಿ ನೋಡಲು ಆಸಕ್ತರಾಗಿದ್ದಾರೆ.

ಇತಿಹಾಸದ ವಿಸ್ತೃತ ಬರವಣಿಗೆಯಲ್ಲಿ ಸಂಖ್ಯಾಶಾಸ್ತ್ರದ ಬಹು ದೊಡ್ಡ ಸಂಖ್ಯೆಗಳನ್ನು ಅಳವಡಿಸಿಕೊಂಡ ಪರಿಣಾಮವಾಗಿ ಇತಿಹಾಸಕಾರರಲ್ಲೇ ಅದರ ಸಮರ್ಥಕರು ಹಾಗೂ ವಿರೋಧಿಗಳ ಬಣಗಳೂ ನಿರ್ಮಾಣವಾಗಿವೆ. ಸಂಖ್ಯೆಗಳನ್ನು ಬಳಸುವುದರಿಂದ ಹುಟ್ಟಬಹುದಾದ ಸಮಸ್ಯೆಗಳ ನವೀನತೆಯನ್ನು ಎರಡೂ ಪಕ್ಷದವರೂ ಇರುವುದಕ್ಕಿಂತಲೂ ದೊಡ್ಡದಾಗಿ ಬಿಂಬಿಸುತ್ತಿದ್ದಾರೆ. ಸುಳ್ಳು ಸಂಖ್ಯೆಗಳನ್ನು ತೋರಿಸಬಹುದಾದಂತೆ ಸುಳ್ಳು ಪಠ್ಯಗಳನ್ನೂ ತೋರಿಸಬಹುದು. ಅಂಕಿಸಂಖ್ಯೆಗಳನ್ನು ತಪ್ಪಾಗಿ ಅರ್ಥೈಸುವುದು ಸುಲಭ. ಆದರೆ ಪಠ್ಯಗಳಿಗೂ ಇದು ಅನ್ವಯವಾಗುತ್ತದೆ. ಯಂತ್ರಗಳು ಓದಬಲ್ಲ ದತ್ತಾಂಶಗಳು ಉಪಯೋಗಕರ್ತರಿಗೆ ಅನುಕೂಲಕರವಾಗಿರುವುದಿಲ್ಲ. ಅನೇಕ ಹಸ್ತಪ್ರತಿಗಳನ್ನು ಓದಲು ಕಷ್ಟವಾದ ಕೈ ಬರೆಹದಲ್ಲಿ ಬರೆದಿರುತ್ತಾರೆ ಹಾಗೂ ಅವು ಜೀರ್ಣಾವಸ್ಥೆಯಲ್ಲಿರುತ್ತವೆ. ಮುಖ್ಯವಾಗಿ ಯಾವ ರೀತಿಯ ಅಂಕಿಸಂಖ್ಯೆಗಳು ವಿಶ್ವಾಸಾರ್ಹ, ಎಷ್ಟರಮಟ್ಟಿಗೆ ಹಾಗೂ ಯಾವ ಉದ್ದೇಶಕ್ಕೆ ಅದರ ಅಗತ್ಯವಿದೆಯೆಂಬುದರ ಅನ್ವೇಷಣೆಯ ವಿವೇಚನೆಗೆ ಸಹಾಯದ ಅಗತ್ಯವಿದೆ. ವಿಶೇಷವಾಗಿ ಬಹು ದೀರ್ಘ ಕಾಲದ ಬದಲಾವಣೆಗಳನ್ನು ಅಧ್ಯಯನಕ್ಕೊಳಪಡಿಸುವಾಗ ಧಾರಾವಾಹಿಕ ಇತಿಹಾಸಕ್ಕೆ ಮೂಲಭೂತವೆನಿಸಿದ 'ಸರಣಿಗಳ' ಪರಿಕಲ್ಪನೆಯನ್ನು ಸಮಸ್ಯಾತ್ಮಕವೆಂಬುದಾಗಿ ಪರಿಗಣಿಸಬೇಕು. ಕಾಲವು ದೀರ್ಘವಾದಷ್ಟೂ ಸರಣಿಗಳ ಘಟಕಗಳಾದ ಮರಣಪತ್ರಗಳು, ಈಸ್ಟರ್ ಕೂಟಗಳ ದಾಖಲೆಗಳು, ಅಥವಾ ಇಂಥವೇ ಘಟಕಗಳು ಏಕರೂಪದಲ್ಲಿರುವ ಸಾಧ್ಯತೆ ಕಡಿಮೆ. ಅವುಗಳೇ ಸ್ವತಃ ಬದಲಾವಣೆಗೆ ಒಳಗಾಗಿರುವಾಗ ಇತರ ಬದಲಾವಣೆಗಳಿಗೆ ಅವನ್ನು ಮಾನದಂಡದಂತೆ ಬಳಸಲು ಹೇಗೆ ಸಾಧ್ಯ?

ಬೇರೆ ಮಾತುಗಳಲ್ಲಿ ಹೇಳುವುದಾದರೆ ನಮಗೆ ಬೇಕಾದದ್ದು (ಛಾಯಾಚಿತ್ರಗಳು ಹಾಗೂ ಹೊಸ ಆಕರಗಳ ವಿಷಯದಲ್ಲಿ ಈಗಾಗಲೇ ಚರ್ಚಿಸಿರುವಂತೆ) 'ಚತುರ ನಿರ್ವಹಣೆ.' ಈ ಪದವನ್ನು ಬೆನಿಡಿಕ್ಟಿನ್ ವಿದ್ವಾಂಸನಾದ ಜಾನ್ ಮೆಬಿಲಾನ್, 'ಡಿಪ್ಲೊಮ್ಯಾಟಿಕ್' ಎಂಬುದಾಗಿ ಬಳಸುತ್ತಾನೆ. ಅವನು ಹದಿನೇಳನೆಯ ಶತಮಾನದ ಉತ್ತರಾರ್ಧದ ಚಾರ್ಟರ್‌ಗಳನ್ನು ಬಳಸಿಕೊಳ್ಳುವ ಮಾರ್ಗದರ್ಶಿಯಲ್ಲಿ ಇದನ್ನು ಉಪಯೋಗಿಸಿದ್ದಾನೆ. ಆಗ ಇಂಥ ಪುರಾವೆಗಳ ಆಕರ್ಷಣೆಯು ಹೊಸದೆನಿಸಿದ್ದು, ಅನೇಕ ಪಾರಂಪರಿಕ ಇತಿಹಾಸಕಾರರಲ್ಲಿ ಸಂದೇಹವನ್ನು ಮೂಡಿಸಿತ್ತು. ಸಂಖ್ಯಾಶಾಸ್ತ್ರ, ಛಾಯಾಚಿತ್ರ ಹಾಗೂ ಮೌಖಿಕ ಇತಿಹಾಸದ ಮೆಬಿಲಾನ್ ಯಾರಾಗಬಲ್ಲರು?

ವಿವರಣೆಯ ಸಮಸ್ಯೆಗಳು

ಇತಿಹಾಸಕಾರನ ಕ್ಷೇತ್ರದ ವಿಸ್ತರಣೆ ಎಂದರೆ ಇತಿಹಾಸದ ವಿವರಣೆಗಳ ಮರುಚಿಂತನೆ ಎಂಬುದನ್ನು ಈಗಾಗಲೇ ಸೂಚಿಸಲಾಗಿದೆ. ಏಕೆಂದರೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪ್ರವೃತ್ತಿಗಳನ್ನು ರಾಜಕೀಯ ಘಟನೆಗಳ ರೀತಿಯಲ್ಲೇ

ವಿಶ್ಲೇಷಿಸಲಾಗುವುದಿಲ್ಲ. ಅವುಗಳಿಗೆ ಹೆಚ್ಚು ಸಂರಚನಾತ್ಮಕ (ಸ್ಟ್ರಕ್ಚರಲ್) ವ್ಯಾಖ್ಯಾನದ ಅಗತ್ಯವಿದೆ. ಇಷ್ಟವಿರಲಿ, ಇಲ್ಲದಿರಲಿ ಅವರು ಸಮಾಜಶಾಸ್ತ್ರಜ್ಞರು ಹಾಗೂ ಇತರೆ ಸಮಾಜ 'ವಿಜ್ಞಾನಿ'ಗಳು ಬಹುಕಾಲದಿಂದ ಆಸಕ್ತರಾಗಿರುವ ಪ್ರಶ್ನೆಗಳ ಕುರಿತು ಕಾಳಜಿವಹಿಸಬೇಕಿದೆ. ಇತಿಹಾಸದಲ್ಲಿ ನಿಜವಾದ ಕರ್ತೃಗಳು ಯಾರು? ವ್ಯಕ್ತಿಗಳೆ ಅಥವಾ ಸಮುದಾಯಗಳೆ? ಅವರು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ರಚನೆಗಳ ಒತ್ತಡಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಬಲ್ಲರೇ? ಈ ರಚನೆಗಳು ಅವರ ಕ್ರಿಯೆಗಳ ಸ್ವಾತಂತ್ರವನ್ನು ನಿರ್ಬಂಧಿಸುವುದೋ ಅಥವಾ ಅವು ಈ ಕರ್ತೃಗಳನ್ನು ಹೆಚ್ಚು ಆಯ್ಕೆಗಳನ್ನು ಮಾಡಲು ಶಕ್ತರನ್ನಾಗಿಸುತ್ತದೆಯೋ?

1950 ಹಾಗೂ 1960ರ ದಶಕಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಇತಿಹಾಸಕಾರರು ಮಾರ್ಕ್ಸ್‌ವಾದಿಗಳಂತೆ ಆರ್ಥಿಕ ಅಂಶಗಳಿಗೆ ಬಾದೆಲ್‌ನಂತೆ ಭೂಗೋಳಶಾಸ್ತ್ರಕ್ಕೆ ಅಥವಾ ಸಾಮಾಜಿಕ ಬದಲಾವಣೆಯ ತಥಾಕಥಿತ(so called) ಮಾಲ್ಥೂಶಿಯನ್ ಮಾದರಿಯಂತೆ ಜನಸಂಖ್ಯಾ ಚಲನೆಗೆ ಆದ್ಯತೆ ನೀಡಿದ್ದಾಗ್ಯೂ, ಹೆಚ್ಚು ಕಡಿಮೆ ಇತಿಹಾಸ ವಿವರಣೆಗಳ ನಿಯತವಾದಿ(determinist) ಮಾದರಿಗಳತ್ತ ಆಕರ್ಷಿತರಾಗಿದ್ದರು. ಆದರೆ 5ನೆಯ ಅಧ್ಯಾಯದಲ್ಲಿ ಜಿಯೊವಾನಿ ಲೆವಿ ಸೂಚಿಸುವಂತೆ ಇಂದು ಸಾಮಾನ್ಯ ಜನರ ಆಯ್ಕೆಯ ಸ್ವಾತಂತ್ರಕ್ಕೆ, ಅವರ ಕಾರ್ಯತಂತ್ರಗಳಿಗೆ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಅಸಂಬದ್ಧತೆಗಳ ಅಸಂಗತಿಗಳ ಪ್ರಯೋಜನ ಪಡೆಯುವ ಕ್ಷಮತೆಗೆ, ನುಸುಳಿ ದಾರಿಮಾಡಿಕೊಳ್ಳಬಹುದಾದ ಲೋಪದೋಷಗಳು ಅಥವಾ ಬದುಕುಳಿಯಬಹುದಾದ ಅಂತರಾಳದ ನೆಲೆಗಳ ಕಂಡುಕೊಳ್ಳುವಿಕೆಗೆ ಒತ್ತು ಕೊಡುವ ಮಾದರಿಗಳು ಅತ್ಯಂತ ಹೆಚ್ಚು ಆಕರ್ಷಣೆಯನ್ನು ಹೊಂದಿವೆ. ಸಾಮಾನ್ಯವಾಗಿ, ವಿವರಣೆಗಳ ಕುರಿತು ಇತಿಹಾಸಕಾರರು ಹೆಚ್ಚೆಚ್ಚು ತೆರೆದ ಮನಸ್ಸಿನವರಾಗುತ್ತಿದ್ದಾರೆ. ಪ್ರಯೋಗಶೀಲತೆಗೆ ಒಡ್ಡಿಕೊಳ್ಳುತ್ತಿದ್ದಾರೆ. ಪರ್ಯಾಯ ಸಂದರ್ಭವನ್ನು ಊಹಿಸಿಕೊಂಡು ಆಗ ಪರಿಸ್ಥಿತಿ ಹೇಗಿರಬಹುದೆಂಬ ನಿಟ್ಟಿನಲ್ಲಿ 'ವಿರುದ್ಧ ದೃಷ್ಟಾಂತ'ಗಳನ್ನು ಪರಿಗಣಿಸುತ್ತಾರೆ.

ಐತಿಹಾಸಿಕ ಲೋಕದ ವಿಸ್ತರಣೆಯಾದಂತೆಲ್ಲ ಅದರ ಪರಿಣಾಮವು ರಾಜಕೀಯ ಇತಿಹಾಸದ ಮೇಲೂ ಆಗಿದೆ. ರಾಜಕೀಯ ಘಟನೆಗಳನ್ನೂ ನಾನಾ ರೀತಿಯಲ್ಲಿ ವಿವರಿಸಬಹುದಾಗಿದೆ. ಉದಾಹರಣೆಗೆ ಫ್ರೆಂಚ್ ಕ್ರಾಂತಿಯನ್ನು ಕೆಳಸ್ತರದಿಂದ ಅಧ್ಯಯನ ಮಾಡುವ ಇತಿಹಾಸಕಾರರು ಮುಂದಾಳುಗಳ ಕಾರ್ಯ ಮತ್ತು ಉದ್ದೇಶಗಳ ಮೇಲೆ ಕೇಂದ್ರೀಕರಿಸಿದ ವಿವರಣೆಗಳಿಗಿಂತ ಬೇರೆಯದೇ ಆದ ವಿವರಣೆಯನ್ನು ನೀಡುವ ಸಾಧ್ಯತೆಯಿದೆ. ಪಾರಂಪರಿಕ ಮಾದರಿಗಳು ಹೇಗೆ ಪ್ರಜ್ಞಾಪೂರ್ವಕತೆ ಹಾಗೂ ವೈಚಾರಿಕತೆಯ ಮಹತ್ವವನ್ನು ಅತಿಯಾಗಿ ಪರಿಗಣಿಸುವೆ ಎಂಬುದನ್ನು ಆಧರಿಸಿ, ತಮ್ಮ ಪ್ರಜ್ಞಾಪೂರ್ವಕ ಹಾಗೂ ಅಪ್ರಜ್ಞಾಪೂರ್ವಕ ಉದ್ದೇಶಗಳನ್ನು ಪ್ರೇರೇಪಿಸುವ ಮೂಲಕ ಮುಂದಾಳುಗಳ ಮೇಲೇ ಗಮನವನ್ನು ಕೇಂದ್ರೀಕರಿಸುವ ಇತಿಹಾಸಕಾರರೂ ಕೆಲವೊಮ್ಮೆ ಇತಿಹಾಸದ ವಿವರಣೆಯ ಪಾರಂಪರಿಕ ಮಾದರಿಗಳಿಂದ ಬೇರೆಯಾಗುತ್ತಾರೆ.

ಉದಾಹರಣೆಗೆ ಬಹುತೇಕವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಿರುವ (ಅಲ್ಲಿ ಮನೋವಿಶ್ಲೇಷಣೆಯು ಬೇರೆಡೆಗಳಿಗಿಂತ ಆಳವಾಗಿ ಸಂಸ್ಕೃತಿಯನ್ನು ಪ್ರವೇಶೀಸಿದೆ), 'ಮನೋಇತಿಹಾಸಕಾರ(psychohistorians)'ರೆಂದು ಕರೆಯಲ್ಪಡುವ ಒಂದು ಗುಂಪು ಫ್ರಾಯ್ಡ್‌ನ ಒಳನೋಟಗಳನ್ನು ಇತಿಹಾಸದ ಪದ್ಧತಿಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದೆ. 1950ರ ದಶಕದಲ್ಲಿ 'ಯುವ ಪುರುಷ ಲೂಥರ್(young man Luther)'ನ ಅಸ್ಮಿತೆಯ ಸಮಸ್ಯೆಗಳ ಕುರಿತ ಅಧ್ಯಯನದಿಂದಾಗಿ ತೀವ್ರ ಆಸಕ್ತಿಯನ್ನು ಕೆರಳಿಸಿದ ಮನೋವಿಶ್ಲೇಷಣಾಕಾರ ಎರಿಕ್ ಎರಿಕ್‌ಸನ್‌ನಿಂದ ಮೊದಲುಗೊಂಡು ಮನೋಇತಿಹಾಸವನ್ನು ಪ್ರಚಾರಮಾಡುವ ಹಾಗೂ ಅನುಸರಿಸುವ ಪೀಟರ್ ಗೇವರೆಗೆ ಇವರ ವ್ಯಾಪ್ತಿಯಿದೆ. ಅವರ ವಿಧಾನಗಳು ವಿವಾದಾಸ್ಪದವಾಗಿರುವುದು ಆಶ್ಚರ್ಯವೇನಲ್ಲ. ಅವರನ್ನು 'ಇತಿಹಾಸವನ್ನು ಸಂಕುಚಿಸಿದವರು' (shrinking history) ಎಂಬುದಾಗಿ ತೆಗಳಲಾಗಿದೆ. ಏಕೆಂದರೆ ವಯಸ್ಕ ವ್ಯಕ್ತಿಯ ಜಟಿಲತೆಗಳನ್ನು (ಅಥವಾ ವಯಸ್ಕರ ನಡುವಿನ ಸಂಘರ್ಷಗಳನ್ನು) ಒಂದು ಮಗು ಮತ್ತು ಅದರ ಪಾಲಕರ ಸಂಬಂಧಕ್ಕೆ ಸರಳೀಕರಿಸುತ್ತಾರೆ ಎನ್ನಲಾಗಿದೆ.

ಇತಿಹಾಸದ ವಿವರಣೆಗಳಿಗೆ ಸಂಬಂಧಿಸಿದ ಇಂದಿನ ವಿವಾದಗಳಿಗೆ ದೃಷ್ಟಾಂತ ನೀಡಲಿಕ್ಕೆ ಹಿಟ್ಲರನ ಉದಾಹರಣೆ ಉಪಯುಕ್ತವಾಗಬಹುದು. ಹೆಚ್ ಆರ್. ಟ್ರೆವರ್ ರೋಪರ್ ಮತ್ತು ಎ.ಜೆ.ಪಿ. ಟೈಲರ್ ನಡುವೆ ಹಿಟ್ಲರನ ದೀರ್ಘಕಾಲಿಕ ಮತ್ತು ಅಲ್ಪಕಾಲಿಕ ಗುರಿಗಳ ಸಾಪೇಕ್ಷ ಮಹತ್ವದ ಕುರಿತು ನಡೆದಂತಹ ಪೂರ್ವವರ್ತಿ(earlier) ಚರ್ಚೆಗಳು ಪ್ರಜ್ಞಾಪೂರ್ವಕ ಉದ್ದೇಶಗಳ ನಿಟ್ಟಿನಲ್ಲಿ ಇತಿಹಾಸದ ವಿವರಣೆಯ ಪಾರಂಪರಿಕ ಮಾದರಿಯ ಅಂಗೀಕಾರಾರ್ಹತೆಯನ್ನು ಊಹಿಸಿದ್ದವು. ಆದರೆ ತೀರಾ ಇತ್ತೀಚೆಗೆ ಈ ಚರ್ಚೆಯು ವಿಸ್ತಾರವಾಗಿದೆ. ರಾಬರ್ಟ್ ವೈಟ್‌ರಂಥ ಕೆಲವು ಇತಿಹಾಸಕಾರರು ಹಿಟ್ಲರನ ಅಸ್ವಾಭಾವಿಕ ಲೈಂಗಿಕತೆ, ಅವನ ತಾಯಿಯ ಸಾವಿನ (ಒಬ್ಬ ಜ್ಯೂ ಡಾಕ್ಟರ್ ಆಕೆಯನ್ನು ಉಪಚರಿಸಿದ ನಂತರ) ಆಘಾತ, ಇತ್ಯಾದಿಗಳಿಗೆ ಒತ್ತು ನೀಡುತ್ತಾ, ಅಪ್ರಜ್ಞಾಪೂರ್ವಕ ಉದ್ದೇಶಗಳು ಮತ್ತು ಮನೋವಿಕೃತಿಯ ನಿಟ್ಟಿನಿಂದಲೂ ಹಿಟ್ಲರನ ವಿವರಣೆಗಳನ್ನು ನೀಡಿದ್ದಾರೆ.

ಮತ್ತೊಂದು ಇತಿಹಾಸಕಾರರ ಗುಂಪು ಇದನ್ನು ಸಾರಾಸಗಟಾಗಿ 'ಉದ್ದೇಶಪೂರ್ವಕತೆಯ ವಾದ' ವೆಂಬುದಾಗಿ ಕರೆದು ಅದನ್ನು ತಿರಸ್ಕರಿಸುತ್ತದೆ. ಅಂದರೆ ಹಿಟ್ಲರನ ಉದ್ದೇಶಗಳಾಗಲೀ ಅಥವಾ ಪ್ರೇರಣೆಗಳಾಗಲೀ ತುಲನಾತ್ಮಕವಾಗಿ ಸೀಮಾಂತ(marginal)ವೆಂದು ಪರಿಗಣಿಸುತ್ತದೆ. 'ಕಾರ್ಯಾತ್ಮಕವಾದಿ'ಗಳೆಂಬುದಾಗಿ ಕರೆಯಲ್ಪಡುವ ಇವರ ಪ್ರಕಾರ (ಅಥವಾ ಸಂರಚನಾತ್ಮಕ ಇತಿಹಾಸಕಾರರು ಎಂದು ನಾನು ಅವರನ್ನು ಕರೆಯಲಿಚ್ಛಿಸುತ್ತೇನೆ) ನಾಝಿ ಜರ್ಮನಿ(ಥರ್ಡ್ ರೈಕ್)ಯ ನೀತಿಗಳ ಐತಿಹಾಸಿಕ ವಿವರಣೆಗಳು, ಹಿಟ್ಲರನ ಸುತ್ತ ಇದ್ದ ವ್ಯಕ್ತಿಗಳು, ಸರ್ಕಾರೀ ವ್ಯವಸ್ಥೆ, ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆ, ಒಂದು ಸಾಮಾಜಿಕ ಚಳವಳಿಯಾಗಿ ನಾಝಿವಾದದ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು. ಸಂರಚನಾತ್ಮಕ ದೃಷ್ಟಿಕೋನವನ್ನು ಮನೋಐತಿಹಾಸಿಕ ದೃಷ್ಟಿಕೋನಗಳ ಜೊತೆಗೆ ಸೇರಿಸುವ ಇತಿಹಾಸಕಾರರು ಕೂಡ ಇದ್ದಾರೆ. ಅವರು ನಾಝಿಗಳಲ್ಲಿದ್ದ ಯಾವೆಲ್ಲ ಗುಣಗಳು ಅವರನ್ನು ಹಿಟ್ಲರನತ್ತ ಸೆಳೆದವು ಎಂಬುದನ್ನು ವಿವರಿಸುವುದರ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಾರೆ.

ಇತಿಹಾಸದಲ್ಲಿ ಇತ್ತೀಚೆಗೆ ನಡೆದ ಅನೇಕ ಚರ್ಚೆಗಳಂತೆ ಹಿಟ್ಲರ್‌ನ ಕುರಿತ ಚರ್ಚೆಯಲ್ಲಿ ಕೂಡ ಒಂದೇ ಕಾಲಕ್ಕೆ ರೋಮಾಂಚಕ ಹಾಗೂ ಗೊಂದಲ ಮೂಡಿಸುವ ಸಂಗತಿಯೆಂದರೆ ಈಗ ಅದನ್ನು 'ನಿಯಮ'ಬದ್ಧವಾಗಿ ನಡೆಸುತ್ತಿಲ್ಲ. ಉತ್ತಮ ಐತಿಹಾಸಿಕ ವಿವರಣೆ ಎಂದರೇನು ಎಂಬ ಬಗ್ಗೆ ಪಾರಂಪರಿಕ ಸಹಮತಿಯು ಭಗ್ನವಾಗಿದೆ. ಇದು ತಾತ್ಕಾಲಿಕ ಅವಸ್ಥೆಯಾಗಿದ್ದು ಅದಕ್ಕೆ ಬದಲಾಗಿ ಮುಂದೆ ಹೊಸ ಅಭಿಪ್ರಾಯಗಳು ಸರ್ವಸಮ್ಮತವಾಗಿ ಬರಲಿವೆಯೊ ಇಲ್ಲ ಭವಿಷ್ಯದಲ್ಲಿ ಇತಿಹಾಸದ ಚರ್ಚೆಗಳನ್ನು ನಡೆಸುವ ರೀತಿಯೇ ಹೀಗಿರಲಿದೆಯೊ?

ಒಂದೊಮ್ಮೆ ಅಂಥ ಸರ್ವಸಮ್ಮತಿ ಸಾಧ್ಯವಾದರೆ ಆಗ 'ಐತಿಹಾಸಿಕ ಮನೋವಿಜ್ಞಾನ'(ಸಾಮೂಹಿಕ ಮನಃಶಾಸ್ತ್ರ)ಕ್ಕೆ ವಿಶೇಷ ಮಹತ್ವವು ಪ್ರಾಪ್ತವಾಗಲಿದೆ. ಏಕೆಂದರೆ ಪ್ರಜ್ಞಾಪೂರ್ವಕ ಹಾಗೂ ಅಪ್ರಜ್ಞಾಪೂರ್ವಕ ಪ್ರೇರಣೆಗಳನ್ನು ಕುರಿತ ಚರ್ಚೆಗಳು ಹಾಗೂ ವ್ಯಕ್ತಿಗತ ಹಾಗೂ ಸಾಮೂಹಿಕ ವಿವರಣೆಗಳ ನಡುವೆ ಅದು ಸಂಪರ್ಕವನ್ನು ರೂಪಿಸಬಲ್ಲದು. ಈ ಕ್ಷೇತ್ರದಲ್ಲಿ ಆಸಕ್ತಿಯು ಹೆಚ್ಚಾಗುತ್ತಿರುವುದು ಉತ್ಸಾಹಜನಕವಾಗಿದೆ. ಇತ್ತೀಚೆಗಿನ ಕೆಲವು ಏಕವಿಷಯಕ ಪ್ರಬಂಧಗಳು ಮಹತ್ವಾಕಾಂಕ್ಷೆ, ಸಿಟ್ಟು, ಆತಂಕ, ಭಯ, ಅಪರಾಧಿ ಮನೋಭಾವ, ಬೂಟಾಟಿಕೆ, ಪ್ರೇಮ, ಹೆಮ್ಮೆ, ರಕ್ಷಿತ ಭಾವ, ಇತ್ಯಾದಿಗಳ ಇತಿಹಾಸವನ್ನು ಕೇಂದ್ರೀಕರಿಸಿವೆ. ಮೇಲೆ ಹೇಳಿದಂತೆ ಅಧ್ಯಯನದ ಈ ಅರಿವಿಗೆ ನಿಲುಕದ ವಿಷಯಗಳ ಅನ್ವೇಷಣೆಯಲ್ಲಿನ ವಿಧಾನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಇದುವರೆಗೂ ಸಾಧ್ಯವಾಗಿಲ್ಲ.

ಉದಾಹರಣೆಗೆ ಮನೋವೈಜ್ಞಾನಿಕ ಕಾಲ ವಿಸಂಗತಿಯನ್ನು ತಪ್ಪಿಸುವ ಪ್ರಯತ್ನದಲ್ಲಿ, ಬೇರೆ ಮಾತುಗಳಲ್ಲಿ ಹೇಳುವುದಾದರೆ, ಗತಕಾಲದ ಜನರು ಇಂದಿನವರ ಹಾಗೇ ಅನುಭವಿಸುತ್ತಿದ್ದರು ಮತ್ತು ಯೋಚಿಸುತ್ತಿದ್ದರು ಎಂಬ ಊಹೆಯು ಮತ್ತೊಂದು ಅತಿರೇಕಕ್ಕೆ ಸಾಗುವ ಮತ್ತು ಗತವನ್ನು ಅರಿವಿಗೆ ನಿಲುಕದಂತೆ ಸಂಪೂರ್ಣವಾಗಿ 'ಅಪರಿಚಿತಗೊಳಿಸುವ' ಅಪಾಯವಿದೆ. ಇತಿಹಾಸಕಾರರು ದ್ವಂದ್ವಕ್ಕೊಳಗಾಗುತ್ತಾರೆ. ಅವರು ವಿವಿಧ ಕಾಲಘಟ್ಟಗಳ ಸಾಮಾಜಿಕ ವರ್ತನೆಯಲ್ಲಿನ ವ್ಯತ್ಯಾಸಗಳನ್ನು ವಿಭಿನ್ನ ಕಾಲಖಂಡದಲ್ಲಿನ ಪ್ರಜ್ಞಾಪೂರ್ವಕ ಧೋರಣೆಗಳು ಮತ್ತು ಸಾಮಾಜಿಕ ಪರಂಪರೆಗಳ ವ್ಯತ್ಯಾಸಗಳ

ಮೂಲಕ ವಿವರಿಸಿದರೆ, ಅದು ವಾಸ್ತವವೆನಿಸದ ಅಪಾಯವಿದೆ. ಅದಕ್ಕೆ ಬದಲಾಗಿ ಅವರು ಸಾಮಾಜಿಕ ಪಾತ್ರಗಳ 'ಗಹನವಾದ ರಚನೆ'ಗಳಲ್ಲಿನ ವ್ಯತ್ಯಾಸಗಳನ್ನಾಧರಿಸಿ ವರ್ತನೆಗಳ ವ್ಯತ್ಯಾಸವನ್ನು ವಿವರಿಸಿದರೆ ಗತಕಾಲದ ವ್ಯಕ್ತಿಗತ ಕರ್ತರ ಸ್ವತಂತ್ರ ಮತ್ತು ಚಲನಶೀಲತೆಯನ್ನು ನಿರಾಕರಿಸುವ ಅಪಾಯಕ್ಕೆ ಸಿಕ್ಕಿಕೊಳ್ಳುತ್ತಾರೆ.

ಈ ಬಿಕ್ಕಟ್ಟಿನಿಂದ ಹೊರಬರುವ ಒಂದು ಸಂಭವನೀಯ ದಾರಿಯೆಂದರೆ ನಿರ್ದಿಷ್ಟ ಸಾಮಾಜಿಕ ಸಮೂಹದ ರೂಢಿಗೆ ಸಂಬಂಧಿಸಿದಂತೆ ಪಿಯರ್ ಬೋರ್ಡ್ಯೂ ಎಂಬ ಸಮಾಜಶಾಸ್ತ್ರಜ್ಞನ ಕಲ್ಪನೆಯ ಬಳಕೆ. ಗುಂಪಿನ ರೂಢಿ ಎಂದರೆ ಬೋರ್ಡ್ಯೂ ಪ್ರಕಾರ ಒಂದು ಸಾಮಾಜಿಕ ಗುಂಪಿನ ಸದಸ್ಯರು ನಿರ್ದಿಷ್ಟ ಸಂದರ್ಭ ಅಥವಾ ಕ್ಷೇತ್ರದ ಅಗತ್ಯಗಳಿಗೆ ಅನುಗುಣವಾಗಿ ನಿರ್ದಿಷ್ಟ ಸಾಂಸ್ಕೃತಿಕ ಸಂಗ್ರಹದಿಂದ ಪ್ರತಿಕ್ರಿಯೆಗಳನ್ನು ಆಯ್ಕೆ ಮಾಡುವ ಪ್ರವೃತ್ತಿ. ಅದು 'ನಿಯಮಗಳು' ಎಂಬ ಪರಿಕಲ್ಪನೆಯಂತಲ್ಲ. ಇದನ್ನು ಉಪಯೋಗಿಸುವವರಿಗೆ ದೊರೆಯುವ ದೊಡ್ಡ ಲಾಭವೆಂದರೆ, ಒಂದು ಸಂಸ್ಕೃತಿಯು ನಿರ್ಧರಿಸಿದ ಮಿತಿಯೊಳಗೆ ವ್ಯಕ್ತಿಗತ ಸ್ವತಂತ್ರದ ವ್ಯಾಪ್ತಿಯನ್ನು ಗುರುತಿಸಲು ಇದು ಅವರಿಗೆ ಅವಕಾಶವನ್ನು ನೀಡುತ್ತದೆ.

ಸಮನ್ವಯದ ಸಮಸ್ಯೆಗಳು

ಇತಿಹಾಸಕಾರನ ವಿಶ್ವವು ವಿಸ್ತಾರಗೊಂಡದ್ದು ಹಾಗೂ ಇತರ ವಿಷಯಗಳ ಜೊತೆಗಿನ ಸಂವಾದಗಳ ವೃದ್ಧಿಯು ಖಂಡಿತವಾಗಿಯೂ ಸ್ವಾಗತಾರ್ಹವಾದುದು. ಅವಕ್ಕೆ ಬೆಲೆಯನ್ನೂ ತೆರಬೇಕಾಗಿದೆ. ವಿಷಯವು ಹಿಂದೆಂದಿಗಿಂತಲೂ ಹೆಚ್ಚು ವಿಘಟಿತವಾಗಿದೆ. ಒಂದೆಡೆ ಆರ್ಥಿಕ ಇತಿಹಾಸಕಾರರು ಅರ್ಥಶಾಸ್ತ್ರಜ್ಞರ ಭಾಷೆಯನ್ನು ಮಾತನಾಡಬಲ್ಲವರಾಗಿದ್ದಾರೆ, ಬೌದ್ಧಿಕ ಇತಿಹಾಸಕಾರರು ತತ್ವಶಾಸ್ತ್ರಜ್ಞರ ಭಾಷೆಯನ್ನು ಮಾತನಾಡಬಲ್ಲವರಾಗಿದ್ದಾರೆ, ಸಾಮಾಜಿಕ ಇತಿಹಾಸಕಾರರು ಸಮಾಜಶಾಸ್ತ್ರಜ್ಞರ ಹಾಗೂ ಮಾನವಶಾಸ್ತ್ರಜ್ಞರ ಭಾಷೆಯನ್ನು ಮಾತನಾಡಬಲ್ಲವರಾಗಿದ್ದಾರೆ. ಮತ್ತೊಂದೆಡೆ ಈ ಇತಿಹಾಸಕಾರರ ಸಮೂಹಗಳ ನಡುವಿನ ಸಂವಾದವು ದಿನದಿಂದ ದಿನಕ್ಕೆ ಹೆಚ್ಚು ದುಸ್ತರವಾಗುತ್ತಿದೆ. ಈ ಪರಿಸ್ಥಿತಿಗೆ ನಾವು ಹೊಂದಿಕೊಳ್ಳಬೇಕೆ ಅಥವಾ ಒಂದು ಸಮನ್ವಯಕ್ಕೆ ಅವಕಾಶವಿದೆಯೆ?

ಈ ಸಮಸ್ಯೆಯ ಕುರಿತು ವ್ಯಕ್ತಿಗತ ಹಾಗೂ ಆಂಶಿಕ ದೃಷ್ಟಿಕೋನಕ್ಕಿಂತ ಹೆಚ್ಚಿನದನ್ನು ನೀಡಲು ಸಾಧ್ಯವಿಲ್ಲ. ನನ್ನ ದೃಷ್ಟಿಕೋನವನ್ನು ಎರಡು ವಿರುದ್ಧ ಅಂಶಗಳಾಗಿ ಸಾರಾಂಶೀಕರಿಸಬಹುದು, ಅವು ಪೂರಕವಾಗಿವೆಯೇ ಹೊರತು ವಿರುದ್ಧವಾಗಿಲ್ಲ. ಮೊದಲನೆಯದಾಗಿ ಉಪ-ವಿಷಯಗಳ ಪ್ರಸರಣವು ಅನಿವಾರ್ಯ. ಈ ಬೆಳವಣಿಗೆಯು ಇತಿಹಾಸಕ್ಕೆ ಸೀಮಿತವಲ್ಲ. ನಮ್ಮ ಹಿಂದಿನ ಔದ್ಯೋಗಿಕ ಅಥವಾ ಔದ್ಯೋಗಿಕೋತ್ತರ ಸಮಾಜದಲ್ಲಿ ವರ್ಧಿಸುತ್ತಿದ್ದ ಅನೇಕ ಶ್ರಮ ವಿಭಜನೆಯಲ್ಲಿ ಇತಿಹಾಸಕಾರನ ವೃತ್ತಿಯು ಒಂದು ಉದಾಹರಣೆ ಅಷ್ಟೆ. ಪ್ರಸರಣಕ್ಕೆ ಅದರದೇ ಆದ ಪ್ರಯೋಜನಗಳಿವೆ. ಅದು ಮನುಷ್ಯ ಜ್ಞಾನವನ್ನು ವಿಸ್ತರಿಸುತ್ತದೆ, ಹೆಚ್ಚು ಕಠಿಣ ವಿಧಾನಗಳನ್ನು ಹಾಗೂ ವೃತ್ತಿಯ ಉನ್ನತ ಮಾನಕಗಳನ್ನು ಪ್ರೋತ್ಸಾಹಿಸುತ್ತದೆ.

ಇಲ್ಲಿ ಲಾಭ, ನಷ್ಟಗಳೆರಡೂ ಇವೆ. ಆದರೆ ಆ ಬೌದ್ಧಿಕ ನಷ್ಟಗಳನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಲು ಏನಾದರೂ ಮಾಡಲು ಸಾಧ್ಯ. ವಿಷಯಗಳು ಅಥವಾ ಉಪ-ವಿಷಯಗಳ ಸಂವಾದಹೀನತೆಯು ಅನಿವಾರ್ಯವಲ್ಲ. ಇತಿಹಾಸದ ನಿರ್ದಿಷ್ಟ ಉದಾಹರಣೆಯಲ್ಲಿ ಸಮನ್ವಯದ ಸೂಚನೆಗಳಿಲ್ಲದಿದ್ದರೂ ಹೊಂದಾಣಿಕೆಯ ಪ್ರೇರಣಾತ್ಮಕ ಸೂಚನೆಗಳಿವೆ.

ರಾಚನಿಕ ಇತಿಹಾಸದ ಕುರಿತ ಉತ್ಸಾಹದ ಮೊದಲ ಅಲೆಯಲ್ಲಿ ಘಟನೆಗಳ ಇತಿಹಾಸವನ್ನು ಹೆಚ್ಚುಕಡಿಮೆ ಹೊರಗೆಸೆಯಲಾಗಿತ್ತು. ಅದೇ ರೀತಿಯಲ್ಲಿ ಸಾಮಾಜಿಕ ಇತಿಹಾಸದ ಅನ್ವೇಷಣೆ ಎಂದರೆ ರಾಜಕೀಯ ಇತಿಹಾಸದ ಕುರಿತ ತಿರಸ್ಕಾರ ಎಂಬಂತಾಗಿತ್ತು. ಅದು ಪಾರಂಪರಿಕ ರಾಜಕೀಯ ಇತಿಹಾಸಕಾರರ ಪೂರ್ವಾಗ್ರಹದ ವಿಲೋಮನ(inversion)ವೆನ್ನಲಾಗಿದೆ. ಮಹಿಳಾ ಇತಿಹಾಸ ಹಾಗೂ ಜನಪ್ರಿಯ ಸಂಸ್ಕೃತಿಯ ಇತಿಹಾಸಗಳಂತಹ ಹೊಸ ಕ್ಷೇತ್ರಗಳನ್ನು ಕೆಲವೊಮ್ಮೆ ವಿದ್ವತ್‌ಪೂರ್ಣ ಸಂಸ್ಕೃತಿಯ ಇತಿಹಾಸ ಹಾಗೂ ಪುರುಷರ ಇತಿಹಾಸದಿಂದ ಸ್ವತಂತ್ರವೆಂಬಂತೆ

(ಅಥವಾ ಅವುಗಳ ವಿರುದ್ಧ) ಪರಿಗಣಿಸಲಾಗಿತ್ತು. ಸೂಕ್ಷ್ಮ ಇತಿಹಾಸ ಹಾಗೂ ದೈನಂದಿನ ಜೀವನದ ಇತಿಹಾಸಗಳು ಮಹಾನ್ ಸಾಮಾಜಿಕ ಪ್ರವೃತ್ತಿಗಳ ಮತ್ತು ಮಾನವನ ಚಹರೆಯಿಲ್ಲದ ಸಮಾಜದ ಅಧ್ಯಯನಕ್ಕೆ ವಿರುದ್ಧವಾದ ಪ್ರತಿಕ್ರಿಯೆಗಳಾಗಿದ್ದವು.

ನಾನು ಉಲ್ಲೇಖಿಸಿದ ಎಲ್ಲಾ ದೃಷ್ಟಾಂತಗಳಲ್ಲೂ ಈ ಪ್ರತಿಕ್ರಿಯೆಗಳಿಗೆ ವಿರುದ್ಧವಾದ ಪ್ರತಿಕ್ರಿಯೆಯೊಂದನ್ನು ಹಾಗೂ ಕೇಂದ್ರಕ್ಕಾಗಿ ಹುಡುಕಾಟವನ್ನು ಅವಲೋಕಿಸಬಹುದು. ಜನಪ್ರಿಯ ಸಂಸ್ಕೃತಿಯ ಇತಿಹಾಸಕಾರರು ಉಚ್ಚ ಮತ್ತು ನಿಮ್ನದ ನಡುವಿನ ಬದಲಾಗುತ್ತಿರುವ ಸಂಬಂಧಗಳನ್ನು ಮತ್ತು ಜನಪ್ರಿಯ ಸಂಸ್ಕೃತಿ ಮತ್ತು ವಿದ್ಯಾವಂತರ ಸಂಸ್ಕೃತಿಯ ನಡುವಿನ ಭೇದನಗಳನ್ನು ವಿವರಿಸುವ ಹಾಗೂ ವಿಶ್ಲೇಷಿಸುವುದರ ಕುರಿತು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಮಹಿಳೆಯರ ಇತಿಹಾಸಕಾರರು ಸಾಮಾನ್ಯ ಸ್ವರೂಪದ ಲಿಂಗ ಸಂಬಂಧಗಳು ಮತ್ತು ಪುರುಷತ್ವ ಮತ್ತು ಸ್ತ್ರೀತ್ವಗಳ ಚಾರಿತ್ರಿಕ ನಿರ್ಮಾಣಗಳನ್ನೂ ಒಳಗೊಳ್ಳಲು ತಮ್ಮ ಆಸಕ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಘಟನೆಗಳು ಮತ್ತು ರಚನೆಗಳ ನಡುವಿನ ಪಾರಂಪರಿಕ ವೈರುಧ್ಯದ ಬದಲಾಗಿ ಅವುಗಳ ನಡುವಿನ ಅಂತಃಸ್ಸಂಬಂಧಗಳ ಅಧ್ಯಯನ ನಡೆಯುತ್ತಿದೆ. ಹಾಗೂ ಕೆಲವು ಇತಿಹಾಸಕಾರರು ವಿಶ್ಲೇಷಣೆಗಳ ಕಥಾತ್ಮಕ ರೂಪಗಳನ್ನು ಅಥವಾ ಕಥನದ ವಿಶ್ಲೇಷಣಾತ್ಮಕ ರೂಪಗಳನ್ನು ಕುರಿತು ಪ್ರಯೋಗ ನಡೆಸುತ್ತಿದ್ದಾರೆ.

ಎಲ್ಲಕ್ಕಿಂತ ಅತ್ಯಂತ ಮಹತ್ವದ ಸಂಗತಿಯೆಂದರೆ ಬಹುಶಃ ರಾಜಕೀಯ ಮತ್ತು ರಾಜಕೀಯೇತರ ಇತಿಹಾಸಕಾರರ ನಡುವೆ ದೀರ್ಘಕಾಲದಿಂದ ಇದ್ದ ವಿರೋಧವು ಕೊನೆಗೂ ತಣ್ಣಗಾಗುತ್ತಿದೆ. ಸಾಮಾಜಿಕ ಇತಿಹಾಸದ ಕುರಿತು ಜಿ.ಎಮ್. ಟ್ರೆವೆಲಿಯನ್ ಅವರ ಕುಪ್ರಸಿದ್ಧ ವ್ಯಾಖ್ಯೆ 'ರಾಜಕೀಯವನ್ನು ಹೊರತುಪಡಿಸಿದ ಇತಿಹಾಸ' ಇಂದು ಬಹುತೇಕ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟಿದೆ. ಅದಕ್ಕೆ ಬದಲಾಗಿ ಇಂದು ನಾವು ರಾಜಕೀಯದಲ್ಲಿ ಸಾಮಾಜಿಕ ಅಂಶಗಳು ಹಾಗೂ ಸಮಾಜದಲ್ಲಿನ ರಾಜಕೀಯ ಅಂಶದ ಕುರಿತು ಕಾಳಜಿಯನ್ನು ಗಮನಿಸುತ್ತೇವೆ. ಒಂದೆಡೆ ರಾಜಕೀಯ ಇತಿಹಾಸಕಾರರು 'ಉನ್ನತ' ರಾಜಕೀಯಕ್ಕೆ, ಮುಂದಾಳುಗಳಿಗೆ, ಪ್ರತಿಷ್ಠಿತರಿಗೆ ಸೀಮಿತರಾಗಿರುವುದಿಲ್ಲ, ಅವರು ಚುನಾವಣೆಗಳ ಭೂಗೋಳಶಾಸ್ತ್ರ, ಸಮಾಜಶಾಸ್ತ್ರ ಮತ್ತು 'ಹಳ್ಳಿಯಲ್ಲಿನ ಗಣತಂತ್ರ'ದ ಕುರಿತು ಚರ್ಚಿಸುತ್ತಾರೆ. ಅವರು 'ರಾಜಕೀಯ ಸಂಸ್ಕೃತಿ'ಗಳನ್ನು, ದಿನನಿತ್ಯದ ಜೀವನದ ಭಾಗವಾಗಿರುವ ಆದರೆ ಒಂದು ಕಾಲ ಮತ್ತು ಪ್ರದೇಶದಿಂದ ಮತ್ತೊಂದಕ್ಕೆ ತೀರಾ ವಿಭಿನ್ನವಾದ ರಾಜಕೀಯ ಗ್ರಹಿಕೆಗಳನ್ನು ಕುರಿತು ಪರೀಕ್ಷಣವನ್ನು ಕೈಗೊಳ್ಳುತ್ತಾರೆ. ಮತ್ತೊಂದೆಡೆ, ಸಮಾಜ ಮತ್ತು ಸಂಸ್ಕೃತಿಗಳನ್ನು ಈಗ ನಿರ್ಣಯ ತೆಗೆದುಕೊಳ್ಳುವ ಕ್ಷೇತ್ರಗಳು ಎಂಬಂತೆ ನೋಡಲಾಗುತ್ತಿದೆ. ಇತಿಹಾಸಕಾರರು ಈಗ 'ಕುಟುಂಬದ ರಾಜಕೀಯ' ಅಥವಾ 'ಭಾಷಾ ರಾಜಕೀಯ'ದ ಕುರಿತು ಅಥವಾ ಮತಾಚರಣೆಗಳು ಅಧಿಕಾರವನ್ನು ಅಭಿವ್ಯಕ್ತಗೊಳಿಸುವ ಅಥವಾ ಸೃಷ್ಟಿಸುವ ವಿಧಾನಗಳ ಕುರಿತು ಚರ್ಚಿಸುತ್ತಾರೆ. ಬ್ರಾದೆಲ್ ಪ್ರತಿಪಾದಿಸಿದ 'ಸಮಗ್ರ ಇತಿಹಾಸ'ದಿಂದ ನಾವಿನ್ನೂ ಬಹು ದೂರ ಇದ್ದೇವೆ. ವಾಸ್ತವವಾಗಿ, ಈ ಗುರಿಯನ್ನು ಎಂದಾದರೂ ತಲುಪುತ್ತೇವೆ ಎಂಬ ನಂಬಿಕೆಯು ಅವಾಸ್ತವಿಕ. ಆದರೆ ಅದನ್ನು ತಲುಪುವ ಕಡೆಗೆ ಕೆಲವೊಂದು ಹೆಚ್ಚಿನ ಹೆಜ್ಜೆಗಳನ್ನು ಇಡಲಾಗಿದೆ.

ಪಶ್ಚಲೇಖ(postscript) 2000

ಈ ಪ್ರಬಂಧ ಸಂಗ್ರಹವನ್ನು ಅಚ್ಚಿಗೆ ಕಳುಹಿಸಿ ಹತ್ತು ವರ್ಷಗಳೇ ಕಳೆದಿವೆ. ಈ ಒಂದು ದಶಕದಲ್ಲಿ ಈ ಸಂಪುಟದಲ್ಲಿ ಚರ್ಚಿಸಿದ ಮೌಖಿಕ ಇತಿಹಾಸ, ಮಹಿಳಾ ಇತಿಹಾಸದಂತಹ ಕೆಲವು ಕ್ಷೇತ್ರಗಳು ಅಥವಾ ದೃಷ್ಟಿಕೋನಗಳ ಕುರಿತು ಅನೇಕ ಸತ್ವಯುತ ಅಧ್ಯಯನಗಳು ಪ್ರಕಟಣೆಯ ಹೊರತಾಗಿಯೂ ಅವು ಮೂಲಭೂತವಾಗಿ ಈ ಅಧ್ಯಾಯಗಳ ಲೇಖಕರು ಏನು ವಾದಿಸಿದ್ದಾರೋ ಹಾಗೇ ಉಳಿದಿವೆ. ಇತರ ಕ್ಷೇತ್ರಗಳು ತಮ್ಮ ಶೀಘ್ರ ವಿಸ್ತರಣೆಯ ಫಲವಾಗಿ ಪ್ರಮುಖ ರೀತಿಯಲ್ಲಿ ಬದಲಾವಣೆಗೊಳಗಾಗಿವೆ. ಉದಾಹರಣೆಗೆ ದೇಹದ ಇತಿಹಾಸ (ಅಧ್ಯಾಯ 10), ಪರಿಸರದ ಇತಿಹಾಸ (ಇದಕ್ಕೆ ಒಂದು ಹೊಸದಾಗಿ ಬರೆದ ಅಧ್ಯಾಯವು ಮೀಸಲಾಗಿದೆ-ಅಧ್ಯಾಯ 11), ಮತ್ತು ಸಿಟ್ಟು, ಭಯ, ಹಾಗೂ ಬೇಸರವನ್ನೂ ಒಳಗೊಂಡಂತೆ, ಭಾವನೆಗಳ ಇತಿಹಾಸ. ಯುದ್ಧ ಮತ್ತು ರಾಜತಾಂತ್ರಿಕತೆಯ ಇತಿಹಾಸದಂತಹ ಹೆಚ್ಚು ಪಾರಂಪರಿಕ ಕ್ಷೇತ್ರಗಳ ಮತ್ತು 'ಹೊಸ

ಸಾಂಸ್ಕೃತಿಕ ಇತಿಹಾಸ'ದ ಸಂಪರ್ಕಗಳು ನಿಕಟಗೊಂಡಿವೆ. ಜಾನ್ ಕೀಗನ್‌ರ ದಿ ಫೇಸ್ ಆಫ್ ಬ್ಯಾಟಲ್ ಹಾಗೂ ಆರಂಭಿಕ ಆಧುನಿಕ ರಾಜತಾಂತ್ರಿಕತೆಯ ಇತ್ತೀಚಿನ ಇತಿಹಾಸಗಳು ಇದಕ್ಕೆ ಉದಾಹರಣೆಗಳು. ಈ ಎರಡನೆಯ ಉದಾಹರಣೆಯಲ್ಲಿ ಶಾಂತಿ ಸಮ್ಮೇಳನಗಳಲ್ಲಿ ಉಪಯೋಗಿಸಲಾದ ಭಾಷೆಗಳು ಮತ್ತು ರೀತಿ ರಿವಾಜುಗಳಲ್ಲಿನ ಬದಲಾವಣೆಗಳ ಮಹತ್ವವನ್ನು ವಿಶ್ಲೇಷಿಸಲು ಸಾಕಷ್ಟು ಜಾಗವನ್ನು ಮೀಸಲಾಗಿಡಲಾಗಿದೆ.

ಇತಿಹಾಸ ಮತ್ತು ಆಧುನಿಕೋತ್ತರ ವಾದ

ಈ ಸಂಪುಟದಲ್ಲಿ ಚಿತ್ರಿಸಿದಂತಹ ಮಾನದಂಡಗಳು ಮತ್ತು ಕಥನಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಸಾಧಾರಣವಾಗಿ 'ಆಧುನಿಕೋತ್ತರವಾದ' ಎಂಬ ಸಾಂಸ್ಕೃತಿಕ ಚಳವಳಿಯ ಲಕ್ಷಣಗಳೆಂಬುದಾಗಿ ಪರಿಗಣಿಸಲಾಗುತ್ತದೆ. ಸಾಹಿತ್ಯದಿಂದ ವಾಸ್ತುಶಿಲ್ಪದವರೆಗಿನ ಅನೇಕ ಇತರೆ ವಿಷಯಗಳ ಅಭ್ಯಾಸಿಗಳಿಗೆ ಹೋಲಿಸಿದಾಗ ಇತಿಹಾಸಕಾರರು, ಅದರಲ್ಲೂ ಬ್ರಿಟನ್ನಿನವರು, ಈ ಹೊಸ ಪ್ರವೃತ್ತಿಯಲ್ಲಿ ತೊಡಗಿಸಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದರು. ವಾಸ್ತವವಾಗಿ, ಈ ಪುಸ್ತಕದ ಮೊದಲನೆಯ ಆವೃತ್ತಿಯ (ಜಿಮ್ ಶಾರ್ಪ್ ಅವರು 2ನೆಯ ಅಧ್ಯಾಯದಲ್ಲಿ ಹಾಗೂ ಜಾನ್ ಡಬ್ಲ್ಯು ಸ್ಕಾಟ್ ಅವರು 3ನೆಯ ಅಧ್ಯಾಯದಲ್ಲಿ ಮತ್ತು ಕೊನೆಯ ಅಧ್ಯಾಯದಲ್ಲಿ ನಾನು ಕೆಲವು ಪ್ರಮುಖ ವಿಷಯಗಳನ್ನು ಚರ್ಚಿಸಿದ್ದಾಗ್ಯೂ) 'ಆಧುನಿಕೋತ್ತರವಾದ'ದಡಿಯಲ್ಲಿ ಯಾವುದೇ ಅನುಕ್ರಮಣಿ(index) ಇರುವುದಿಲ್ಲ.

ಆದರೆ ಕಳೆದ ದಶಕದಲ್ಲಿ 'ಆಧುನಿಕೋತ್ತರ ಚರ್ಚೆ' ಎಂಬುದಾಗಿ ಕರೆಯಬಹುದಾದ ಸಂಗತಿಯ ಕುರಿತು ಒಂದು ನಿಲುವನ್ನು ತೆಗೆದುಕೊಳ್ಳದೇ ತಪ್ಪಿಸಿಕೊಳ್ಳಲು ಕಷ್ಟವಾಗತೊಡಗಿತು. ಈ ಚರ್ಚೆಯಲ್ಲಿ ವಿಮರ್ಶಕರು ಲಿಯೊಪೊಲ್ಡ್ ವಾನ್ ರಾಂಕೆಯವರಂಥ ಪಾರಂಪರಿಕ ಇತಿಹಾಸಕಾರರನ್ನು ತಿರಸ್ಕರಿಸಿದರು. 'ವಾಸ್ತವವಾಗಿ ಏನು ನಡೆಯಿತು' ಎಂಬುದನ್ನು ಪುನಃ ಪಡೆಯುವ ಹಾಗೂ ವಿವರಿಸುವ ರಾಂಕೆಯ ಆದರ್ಶವು ಅಸಂಭವವೆಂಬುದು ಈ ನಿರಾಕರಣೆಗೆ ಆಧಾರವಾಗಿತ್ತು. 'ಕಥನದ ಪುನರುತ್ಥಾನ' ಎಂದು ಕರೆಯಲಾಗುವ ಸಂಗತಿಯ ಸಂದರ್ಭದಲ್ಲಿ ಆದಂತೆಯೇ ಈ ಚರ್ಚೆಯ ಕುರಿತು ಕೂಡ ಲಾರೆನ್ಸ್ ಸ್ಟೋನ್ ಅವರು ಅನೇಕ ಬ್ರಿಟಿಷ್ ಇತಿಹಾಸಕಾರರು ಮತ್ತು ವಿದ್ಯಾರ್ಥಿಗಳ ಗಮನವನ್ನು ಸೆಳೆದರು, ಈ ಬಾರಿ 'ಪಾಸ್ಟ್ ಎಂಡ್ ಪ್ರೆಸೆಂಟ್'(1991)ರಲ್ಲಿ ಒಂದು 'ಟಿಪ್ಪಣಿ'ಯು ಅನೇಕ ಪ್ರತಿಕ್ರಿಯೆಗಳಿಗೆ ಪ್ರಚೋದನೆ ನೀಡಿತು. ತೀರಾ ಇತ್ತೀಚೆಗೆ ರಿಚರ್ಡ್ ಎವನ್ಸ್ ಅವರ ಇನ್ ಡಿಫೆನ್ಸ್ ಆಫ್ ಇತಿಹಾಸ(1997) ಎಂಬ ವಿಶಿಷ್ಟ ಆಕ್ರಾಮಕ ಲೇಖನವು ಈ ಚರ್ಚೆಯ ನಿಟ್ಟಿನ ಮಾರ್ಗದರ್ಶನ ಮತ್ತು ಮಧ್ಯಸ್ಥಿಕೆಗಳೆರಡನ್ನೂ ನಿರ್ವಹಿಸಿದೆ.

ಈ ಚರ್ಚೆಯು ನಿರ್ದಿಷ್ಟವಾಗಿ ಯಾವ ಸಮಸ್ಯೆಯ ಕುರಿತಾಗಿದೆ? ಡಚ್ ದಾರ್ಶನಿಕ ಫ್ರಾಂಕ್ ಅಂಕರ್‌ಸ್ಮಿಟ್ ಎಂಬುವವರು ನತಾಲಿ ಡೇವಿಸ್ ಮತ್ತು ಕಾರ್ಲೊ ಗಿನ್ಸ್‌ಬರ್ಗ್ ಅವರನ್ನು ಆಧುನಿಕೋತ್ತರವಾದಿಗಳು ಅಥವಾ ಆಧುನಿಕೋತ್ತರ ಇತಿಹಾಸಕಾರರೆಂಬುದಾಗಿ ವರ್ಣಿಸಿದ್ದು, ಈ ಪ್ರಶ್ನೆಗೆ ಉತ್ತರಿಸುವ ಕಷ್ಟವೇನೆಂಬುದನ್ನು ಈ ವರ್ಣನೆಯ ದೃಷ್ಟಾಂತದಿಂದ ತಿಳಿಸಬಹುದು. ಈ ವರ್ಣನೆಯನ್ನು ಅವರಿಬ್ಬರೂ ತೀವ್ರವಾಗಿ ವಿರೋಧಿಸಿದ್ದಾರೆ. "ಆಧುನಿಕೋತ್ತರವಾದ' ಎಂಬುದು ಜನರ ಸಮೂಹವೊಂದನ್ನು ಒಟ್ಟಿಗೇ ತರುವ ಕೊಡೆಯಂತೆ ಇದೆ. ಅವರಲ್ಲಿ ಕೆಲವರು ಡೆರಿಡಾ ಥರದ ಸಾಂಸ್ಕೃತಿಕ ಸಿದ್ಧಾಂತಕಾರರನ್ನು ಅನುಸರಿಸುತ್ತಾರೆ. ಇತರರು ಆರ್ಥಿಕ ಮತ್ತು ಸಾಮಾಜಿಕ ನಿಯತಿವಾದದ ವಿರುದ್ಧ ಪ್ರತಿಕ್ರಿಯಿಸಿದ್ದಾರೆ ಹಾಗೂ 'ಸಾಮಾಜಿಕ ವಾಸ್ತವತೆ' ('ವಾಸ್ತವಿಕತೆ ಎಂಬ ಶಬ್ದವನ್ನು ಉತ್ತಮ ಆಧುನಿಕೋತ್ತರವಾದಿಗಳು ಪ್ಲೇಗು ಎಂಬಂತೆ ದೂರವಿಡುತ್ತಾರೆ) ಎಂಬುದಾಗಿ ಕರೆಯಲಾಗುವ ಶಬ್ದದ ಸುಲಭನಾಶ್ಯತೆ ಮತ್ತು ಅಸ್ಥಿರತೆಯ ಕುರಿತು ಒತ್ತು ನೀಡುತ್ತಾರೆ. ಹಾಗಾಗಿ ಮೂರು ಚರ್ಚಾಂಶಗಳನ್ನು ಅಥವಾ ಚರ್ಚೆಗಳನ್ನು ಪ್ರತ್ಯೇಕಿಸುವುದು ಪ್ರಯೋಜನಕಾರಿಯಾಗಬಹುದು. ಅವುಗಳಲ್ಲೊಂದು, ಆಯ್ಕೆಯನ್ನು ಕೇಂದ್ರೀಕರಿಸಿದ್ದು, ಎರಡನೆಯದು ವಿವರಣೆಯನ್ನು ಹಾಗೂ ಮೂರನೆಯದು ಕಾಲ್ಪನಿಕ ಸತ್ಯದ ಕುರಿತಾಗಿದೆ.

ಮೊದಲನೆಯದಾಗಿ ಪಾರಂಪರಿಕ ಇತಿಹಾಸಕಾರರನ್ನು ಸಾಧಾರಣ 'ವಿಜಯವಾದಿ' ಕಥೆಯನ್ನು, 'ಮಹಾನ್ ಕಥನವನ್ನು' (ಮೆಟಾ ನರೇಟಿವ್), ಅಥವಾ ''ಮುಖ್ಯ ಕಥನ'(ಮಾಸ್ಟರ್ ನರೇಟಿವ್)ಗಳನ್ನು ಹೇಳುತ್ತಾ ಬಂದಿದ್ದಾರೆಂಬ ಕಾರಣಕ್ಕೆ ಟೀಕಿಸಲಾಗುತ್ತಿದೆ. ಈ ಕಥನಗಳು ಪಶ್ಚಿಮ ಹಾಗೂ ಅದರ ಪ್ರತಿಷ್ಠಿತರಿಗೆ ಅದರಲ್ಲೂ ವಿಶೇಷವಾಗಿ ಪ್ರತಿಷ್ಠಿತ ಪುರುಷ ವರ್ಗದವರ ಪುನರುಜ್ಜೀವನ, ಸುಧಾರಣೆ, ಜ್ಞಾನೋದಯ, ಫ್ರೆಂಚ್ ಹಾಗೂ ಕೈಗಾರಿಕಾ ಕ್ರಾಂತಿ, ಆಧುನಿಕತೆ, ಮುಂತಾಗಿ ಅವರ ಸಾಧನೆಗಳತ್ತ ಗಮನವನ್ನು ಕೇಂದ್ರೀಕರಿಸಿ, ವಿಶೇಷಾಧಿಕಾರವನ್ನು ನೀಡಿವೆ .ಇದಕ್ಕೆ ಪರಿಹಾರವಾಗಿ ಇತರೆ ಪ್ರಕಾರದ ಶೋಷಿತರು, ಅಧೀನಸ್ಥರು ಅಥವಾ 'ಕೆಳದರ್ಜೆಯ' ಜನರ ಸಮೂಹ ಮತ್ತು ಅವರ ದೃಷ್ಟಿಕೋನಕ್ಕೂ ಅವಕಾಶವಿರುವ 'ವಿಕೇಂದ್ರೀಕೃತ' ಇತಿಹಾಸವನ್ನು ಸೂಚಿಸಲಾಯಿತು. ಹಾಗಾಗಿ 12ನೆಯ ಅಧ್ಯಾಯದಲ್ಲಿ ಚರ್ಚಿಸಿರುವ ಬಹು ದೃಷ್ಟಿಕೋನಗಳ ಕಥನವನ್ನು ಪ್ರಯೋಗಕ್ಕೆ ಒಳಪಡಿಸುವ ಅವಶ್ಯಕತೆಯಿದೆ. ಈ ಚರ್ಚೆಯಲ್ಲಿ ನತಾಲಿ ಡೇವಿಸ್ ಮತ್ತು ಕಾರ್ಲೊ ಗಿನ್ಜ್‌ಬರ್ಗ್ ಅವರು ವಿಮರ್ಶಕರ ಪಕ್ಷದಲ್ಲಿದ್ದಾರಲ್ಲದೆ,. ರೈತ ಬರ್ಟೆಂಡ್ ರೋಲ್ಸ್ ಮತ್ತು ಮೆನೋಚಿಯೊ ಸ್ಕ್ಯಾಂಡೆಲ ಮುಂತಾದ ಸಾಮಾನ್ಯ ಜನರನ್ನು ತಮ್ಮ ಪುಸ್ತಕಗಳ ನಾಯಕರಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ.

ಎರಡನೆಯದಾಗಿ ಮುಂದಾಳುಗಳ (ಮಹಾ ಪುರುಷರ) ಉದ್ದೇಶಗಳ ಅಥವಾ ಸಾಮಾಜಿಕ ಶಕ್ತಿಗಳ ನಿಟ್ಟಿನ ಪಾರಂಪರಿಕ ಇತಿಹಾಸದ ವಿವರಣೆಗಳನ್ನು ಪ್ರಶ್ನಿಸಲಾಯಿತು. ಹೊಸ ಪ್ರವೃತ್ತಿಯು (1960ರ ದಶಕದ ಎಡ್ವರ್ಡ್ ಥಾಮ್ಸನ್ ಅವರ ಉದಾಹರಣೆಯನ್ನು ಅನುಸರಿಸಿ) ತಮ್ಮ ಇತಿಹಾಸವನ್ನು ರೂಪಿಸಿಕೊಳ್ಳುವಲ್ಲಿನ ಸಾಮಾನ್ಯ ಜನರ ಪಾತ್ರಕ್ಕೆ ಒತ್ತು ನೀಡಿದೆ. ಅವರು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ, ರಾಷ್ಟ್ರದಂಥ ಸಾಮಾಜಿಕ ಸಂಸ್ಥೆಗಳ ಸಾಂಸ್ಕೃತಿಕ 'ನಿರ್ಮಿತಿ' ಅಥವಾ 'ಆವಿಷ್ಕಾರದಲ್ಲಿ 'ಭಾಗೀದಾರರಾಗಿರುತ್ತಾರೆ. ಅದರ ಪರಿಣಾಮವಾಗಿ ಅಥೆನ್ಸ್, ಆಫ್ರಿಕಾ, ಅರ್ಜೆಂಟೈನ, ಸ್ಕಾಟ್‌ಲ್ಯಾಂಡ್, ಐರ್ಲೆಂಡ್, ಯೂರೋಪ್, ಇತ್ಯಾದಿಗಳ ಆವಿಷ್ಕಾರದ ಬಗ್ಗೆ ಇತ್ತೀಚೆಗೆ ಪುಸ್ತಕಗಳ ಮಹಾಪೂರವನ್ನೇ ಕಾಣಬಹುದಾಗಿದೆ. ಈ ಬದಲಾವಣೆಯು ಹಿಂದೆ ಕೆಲವು ಕಂಡಿಕೆಗಳಲ್ಲಿ ತಿಳಿಸಿರುವ ಸಾಂಸ್ಕೃತಿಕ ಇತಿಹಾಸದ ಕುರಿತು ಹೆಚ್ಚುತ್ತಿರುವ ಆಸಕ್ತಿಗೆ ಸಂಬಂಧಿಸಿದೆ.

ಮೂರನೆಯದಾಗಿ ಮಿಶೆಲ್ ಫೂಕೋರಿಂದ ಹೆಯ್ಡನ್ ವೈಟ್‌ರವರೆಗಿನ ವಿಮರ್ಶಕರು ಇತಿಹಾಸವು ಒಂದು ಥರದ ಕಾಲ್ಪನಿಕ ಕಥನ ಎಂಬುದಾಗಿ ವಾದಿಸಿದ್ದಾರೆ. ಇತಿಹಾಸಕಾರರು ( ವಿಜ್ಞಾನಿಗಳಂತೆ) ತಾವು ಅಧ್ಯಯನ ನಡೆಸುವ ತಥ್ಯಗಳನ್ನು 'ನಿರ್ಮಿಸು'ತ್ತಾರೆ ಹಾಗೂ ಅವರ ಕಥೆಗಳು ದುರಂತ, ದುರಂತ-ಹರ್ಷದಂತಹ ಪ್ರಮುಖ ಕಲ್ಪಿತ ಕಥಾನಕಗಳನ್ನು ಅನುಸರಿಸುತ್ತವೆ. ಈ ಚರ್ಚೆಯಲ್ಲಿ ಸಾರ್ವಜನಿಕ ಪತ್ರಾಗಾರದಲ್ಲಿ ಸಂರಕ್ಷಿಸಲ್ಪಟ್ಟ ಸಮಕಾಲೀನ ದಸ್ತಾವೇಜುಗಳ ಸಹಾಯದಿಂದ ತಮ್ಮ ಕಥೆಗಳನ್ನು ನಿರ್ಮಿಸಿರುವ ಗಿನ್ಜ್‌ಬರ್ಗ್ ಮತ್ತು ಡೇವಿಸ್ ಅವರು ಇತಿಹಾಸಕಾರರ ಪಕ್ಷದಲ್ಲಿದ್ದಾರೆ. ಆದರೂ ಈ ಚರ್ಚೆಯಲ್ಲಿ ಎರಡಕ್ಕಿಂತಲೂ ಹೆಚ್ಚಿಗೆ ನಿಲುವುಗಳು ಸಾಧ್ಯವಿವೆ ಎಂಬ ಮಾತನ್ನು ಇಲ್ಲಿ ಸೇರಿಸಬೇಕು. ಫಿಕ್ಷನ್ ಇನ್ ದಿ ಆರ್ಕೈವ್ಸ್ ಗ್ರಂಥಕರ್ತೃ, ನತಾಲಿ ಡೇವಿಸ್ ಅವರಿಗೆ ದಾಖಲೆಗಳನ್ನು ಯಾವಾಗಲೂ ಇದಮಿತ್ಥಂ ಎಂದು ನಂಬುವಂತಿಲ್ಲ ಎಂಬುದು ಚೆನ್ನಾಗಿ ತಿಳಿದಿದೆ.

ವಾಸ್ತವವಾಗಿ, ಸಾಕ್ಷಿಗಳನ್ನು ಎಷ್ಟರಮಟ್ಟಿಗೆ ನಂಬಬೇಕು ಹಾಗೂ ಎಷ್ಟರಮಟ್ಟಿಗೆ ಇತಿಹಾಸಕಾರರು ಅನುಕ್ರಮದಲ್ಲಿ ನಡುವೆ ಬಿಟ್ಟುಹೋದ ಜಾಗಗಳನ್ನು ತಮ್ಮ ಕಲ್ಪನೆಯಿಂದ ತುಂಬುತ್ತಾರೆ ಎಂಬುದನ್ನು ಸ್ಪಷ್ಟಪಡಿಸುವುದು ಕಷ್ಟದ ಕೆಲಸವೆಂಬುದರ ಬಗ್ಗೆ ಇತಿಹಾಸಕಾರರಿಗೆ ಹಿಂದಿನಿಂದಲೂ ಅರಿವಿದೆ. ಅವರು ಪಾರಂಪರಾವಾದ(traditionalism) ಹಾಗೂ ಆಧುನಿಕೋತ್ತರವಾದಗಳ ಎರಡು ಪರಮಾವಧಿಗಳ ನಡುವೆ ಅನೇಕ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ಈ ಕಾರಣದಿಂದಾಗಿ ರಿಚರ್ಡ್ ಎವನ್ಸ್ ಅವರು ತಮ್ಮ ಪುಸ್ತಕಕ್ಕೆ ಇನ್ ಡಿಫೆನ್ಸ್ ಆಫ್ ಹಿಸ್ಟರಿ ಎಂಬ ಶೀರ್ಷಿಕೆಯನ್ನು ನೀಡಿದ್ದು ಚರ್ಚೆಯಲ್ಲಿ ಒಂದು ಪರಿಣಾಮಕಾರಿ ವಿವಾದಾಸ್ಪದ ತಂತ್ರವಾಗಿರಬಹುದು. ಆದರೆ ಅದು ಒಂದು ನಿರ್ದಿಷ್ಟ ರೀತಿಯ ಇತಿಹಾಸವನ್ನು ಸಮರ್ಥಿಸುವ ಕೆಲಸವನ್ನು ಮಾಡುತ್ತಿರುವುದರಿಂದ ತಪ್ಪು ದಾರಿಗೆಳೆಯುವಂಥದ್ದಾಗಿದೆ. ಈ ಪುಸ್ತಕದ ಉಳಿದ

ಅಧ್ಯಾಯಗಳಲ್ಲಿ ಓದುಗರಿಗೆ ಇತಿಹಾಸ ಬರವಣಿಗೆಯನ್ನು ನಡೆಸಲು ಪರಸ್ಪರ ಸ್ಪರ್ಧಿಸುವ ಅನೇಕ ರೀತಿಗಳಿವೆ ಎಂಬುದು ಸ್ಪಷ್ಟವಾಗತಕ್ಕದ್ದು..